# ಅಧ್ಯಾಯ–೧೧
# ಇತರೆ ಇಲಾಖೆಗಳು

ಪುರಾತನ ಕಾಲದಿಂದಲೂ ಒಂದು ಪರಂಪರಾನುಗತ ರಾಜ್ಯಾಡಳಿತ ವ್ಯವಸ್ಥೆಯು ವಿಜಯನಗರದ ಅರಸರು ಮತ್ತು ಆನಂತರದ ಪಾಳೇಗಾರರ ಆಳ್ವಿಕೆಯ ಕಾಲದವರೆವಿಗೂ ಮುಂದುವರೆಯಿತು. ಇದರಲ್ಲಿ ರಾಜನು ಪರಮಾಧಿಕಾರ ಹೊಂದಿದ್ದನು. ಧರ್ಮಶಾಸ್ತ್ರ ಮತ್ತು ನೀತಿಶಾಸ್ತ್ರಗಳಲ್ಲಿ ರಾಜನ ಹಾಗೂ ಪ್ರಜೆಗಳ ಹಿತಾಸಕ್ತಿಯು ಸಮಾನವೆಂದು ಪರಿಗಣಿಸಲ್ಪಟ್ಟಿದ್ದಿತು. ನ್ಯಾಯಾಡಳಿತ, ಪ್ರಜಾರಕ್ಷಣೆ, ಸಮಾಜ ವ್ಯವಸ್ಥೆ ಕಾಪಾಡುವಿಕೆ, ಅರ್ಥನಿರ್ವಹಣೆ, ಶಿಷ್ಟ ರಕ್ಷಣೆ, ದುಷ್ಟದಂಡನೆ, ಲೋಕೋಪಯೋಗಿ ಕಾರ್ಯಕ್ರಮಗಳನ್ನು ಕೈಗೊಳ್ಳುವಿಕೆ ಮತ್ತು ಧರ್ಮಾನುಸರಣೆಯಂತಹ ಜವಾಬ್ದಾರಿಗಳು ಈ 'ರಾಜಧರ್ಮ'ದ ಆಡಳಿತ ಕ್ರಮಕ್ಕೆ ಒಳಪಟ್ಟಿದ್ದವು. ಈ ಆಡಳಿತ ವ್ಯವಸ್ಥೆಯಲ್ಲಿ ಶಿಸ್ತು ನಿಯಂತ್ರಿಸಲು ಹಾಗೂ ಕಾರ್ಯಕ್ರಮಗಳನ್ನು ವಿವರಿಸಲು ವಿವಿಧ ಇಲಾಖಾ ವ್ಯವಸ್ಥೆಗಳಿದ್ದವು. ಇಂತಹ ಸಾಂಪ್ರದಾಯಿಕ ವಿಭಾಗಗಳು ಮೈಸೂರು ಅರಸರ ಕಾಲದಲ್ಲೂ ಮುಂದುವರೆದವು.

ಆದರೆ, ಮೈಸೂರಿನ ಚಿಕ್ಕದೇವರಾಜ ಒಡೆಯರ್ (೧೬೭೩–೧೭೦೪) ತನ್ನ ಆಡಳಿತ ಪದ್ಧತಿಯಲ್ಲಿ ಸಮಗ್ರ ಬದಲಾವಣೆ ತಂದನು. ಆತನು ಮೊಘಲ್ ಮಾದರಿಯ ಆಡಳಿತ ಕ್ರಮವನ್ನು ರಾಜ್ಯಾಡಳಿತಕ್ಕೆ ಸರಿ ಹೊಂದುವಂತೆ ರೂಪಿಸಿಕೊಳ್ಳುವ ಸಲುವಾಗಿ ತನ್ನ ರಾಯಭಾರಿ ನಿಯೋಗವನ್ನು ಮೊಘಲ್ ಚಕ್ರವರ್ತಿಗಳ ಆಸ್ಥಾನಕ್ಕೆ ಕಳುಹಿಸಿ, ಆ ನಿಯೋಗದ ಸಲಹೆ ಮೇರೆಗೆ ಆ ಕಾಲಕ್ಕೆ ಪ್ರಸಿದ್ಧಿ ಪಡೆದ ಹದಿನೆಂಟು ಚಾವಡಿ (ವಿಭಾಗ ಅಥವಾ ಇಲಾಖೆ) ಗಳನ್ನು ಸ್ಥಾಪಿಸಿ (೧೭೦೦–೧೭೦೪) ಆಡಳಿತವನ್ನು ಸಂಪೂರ್ಣವಾಗಿ ಕೇಂದ್ರೀಕೃತಗೊಳಿಸಿದನು. ಈ ಹದಿನೆಂಟು ಚಾವಡಿಗಳೇ ಮುಂದೆ **'ಅಠಾರ ಕಚೇರಿ'** ಎಂದು ಮನ್ನಣೆ ಪಡೆದವು. ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟ ಆನಂತರವೂ ಮೈಸೂರು ಸಂಸ್ಥಾನದಲ್ಲಿ ಈ ಆಡಳಿತ ವ್ಯವಸ್ಥೆಯು ಜಾರಿಯಲ್ಲಿದ್ದಿತು. ಈ ಹದಿನೆಂಟು ಕಚೇರಿಗಳ ಸಮೂಹವು ಮೈಸೂರು, ಶ್ರೀರಂಗಪಟ್ಟಣ ಹಾಗೂ ಬೆಂಗಳೂರಿನ ಟಿಪ್ಪು ಅರಮನೆ, ಆನಂತರದಲ್ಲಿ ಈಗಿನ ಹೈಕೋರ್ಟ್‌ನ (ಉಚ್ಚ ನ್ಯಾಯಾಲಯ) ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಬಗ್ಗೆ ದಾಖಲೆಗಳು ಇವೆ. ಈಗಲೂ ಶ್ರೇಷ್ಠನ್ಯಾಯಾಲಯ ಕಟ್ಟಡವನ್ನು **'ಅಠಾರ ಕಚೇರಿ''** ಎಂದು ಗುರುತಿಸುವುದು ರೂಢಿಯಲ್ಲಿದೆ. ಈ ಚಾವಡಿಗಳು ಕ್ರಮವಾಗಿ **೧. ನಿರೂಪದ ಚಾವಡಿ:** ಸಾರ್ವಜನಿಕರಿಂದ ಮನವಿ ಸ್ವೀಕರಿಸಿ ದಾಖಲು ಮಾಡಿ, ವರದಿ ತಯಾರಿಸುವ ಹಾಗೂ ಅವುಗಳ ವಿಲೇವಾರಿ ಮಾಡುವ ಇಲಾಖೆ

**೨. ಆಯಕಟ್ಟಿನ ಚಾವಡಿ:** ೮೪ ಆಡಳಿತ ಘಟಕಗಳನ್ನೊಳಗೊಂಡ ಸಿವಿಲ್ ಮತ್ತು ಮಿಲಿಟರಿ ಲೆಕ್ಕಪತ್ರ ಇಲಾಖೆ **೩. ಮೈಸೂರು ಹೋಬಳಿ ವಿಚಾರ ಚಾವಡಿ:** ದಕ್ಷಿಣ ಆಡಳಿತೀಯ ಘಟಕಗಳ ವ್ಯವಹಾರದ ಮೇಲೆ ಇರುವ ವಿಚಾರಣಾ ಇಲಾಖೆ **೪. ಪಟ್ಟಣ ಹೋಬಳಿ ವಿಚಾರ ಚಾವಡಿ ೫. ಸೀಮೆ ಕಂದಾಚಾರದ ಚಾವಡಿ:** ಪೌರ ಹಾಗೂ ಮಿಲಿಟರಿ ಸ್ಥಾವರಗಳ ಲೆಕ್ಕ ಪತ್ರಗಳನ್ನಿಡುವುದು, ಅಗತ್ಯವಾದ ಶಸ್ತ್ರಾಸ್ತ್ರಗಳು ಮತ್ತು ಮದ್ದು ಗುಂಡುಗಳ ವ್ಯವಹಾರ ನೋಡಿಕೊಳ್ಳುವ ಇಲಾಖೆ **೬. ಬಾಗಿಲ ಕಂದಾಚಾರದ ಚಾವಡಿ:** ಮಿಲಿಟರಿ ಮತ್ತು ಪೌರ ಹುಜೂರ್ ಅಧಿಕಾರಿಗಳು ಮತ್ತು ಪಾಳೇಗಾರರಿಗೆ ಸಂಬಂಧಪಟ್ಟ ಲೆಕ್ಕಪತ್ರ ವಿಭಾಗ **೭. ಸುಂಕದ ಚಾವಡಿ:** ಸರಕು ಸಾಗಾಣಿಕೆಯ ಸುಂಕದ ಒಟ್ಟು ಲೆಕ್ಕ, ಆಮದು ಮತ್ತು ರಫ್ತು ತೆರಿಗೆ ವಿಭಾಗ **೮. ಪೊಮ್ಮಿನ ಚಾವಡಿ:** ವಿಶೇಷ ತೆರಿಗೆ ಇಲಾಖೆ **೯. ತೋಡಾಯದ ಚಾವಡಿ:** ಶ್ರೀರಂಗಪಟ್ಟಣದ ಕೆಲವು ನಿರ್ದಿಷ್ಟ ವರ್ಗಗಳಿಂದ ಮಾತ್ರ (ಸುಂಕಗಳನ್ನಾಗಿ) ಪ್ರವೇಶ ತೆರಿಗೆಯನ್ನು ವಸೂಲಿ ಮಾಡುವ ಇಲಾಖೆ **೧೦. ಪಟ್ಟಣ ಹೋಬಳಿ ಅಷ್ಟಗ್ರಾಮದ ಚಾವಡಿ:** ಚಿಕ್ಕದೇವರಾಜ ಸಾಗರ ನಾಲೆಯ ಕೆಳಗಿನ ಎಂಟು ಹೋಬಳಿಗಳ ಅಧಿಕಾರ ವ್ಯಾಪ್ತಿ ಉಳ್ಳ ಇಲಾಖೆ **೧೧. ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ ೧೨. ಬೆಣ್ಣೆ ಚಾವಡಿ:** ಅರಮನೆಗೆ ಸಂಬಂಧಿಸಿದ ದನಕರುಗಳ ಸಾಕಾಣಿಕೆ, ಪ್ರತಿ ದಿನದ ಹಾಲು ಉತ್ಪನ್ನಗಳ ಸಂಗ್ರಹಣೆ, ವಿನಿಯೋಗಕ್ಕೆ ಸಂಬಂಧಿಸಿದ ಲೆಕ್ಕಪತ್ರ ವಿಭಾಗ **೧೩. ಪಟ್ಟಣದ ಚಾವಡಿ:** ಅರಮನೆ, ಕೋಟೆ, ಕೊತ್ತಲಗಳು, ಉಗ್ರಾಣಗಳು, ಆಯುಧಾಗಾರಗಳು ಹಾಗೂ ರಾಜಧಾನಿಯಲ್ಲಿ ಕಾನೂನು ವ್ಯವಸ್ಥೆಯನ್ನು ಕಾಪಾಡುವ ಹೊಣೆಗಾರಿಕೆಯ ಇಲಾಖೆ **೧೪. ಬೇಹಿನ ಚಾವಡಿ:** ಇದು ಗುಪ್ತಚಾರ ಇಲಾಖೆ ಹಾಗೂ ತುರ್ತು ಅಂಚೆ ವ್ಯವಸ್ಥೆ **೧೫. ಸಮ್ಮುಖದ ಚಾವಡಿ:** ರಾಜ ಮನೆತನದವರು, ಅರಮನೆಯ ವಿವಿಧ ವಿಭಾಗಗಳ ಅಧೀನ ಸಿಬ್ಬಂದಿ ಕುರಿತಾದ ಲೆಕ್ಕಪತ್ರ ಇಲಾಖೆ **೧೬. ದೇವಸ್ಥಾನದ ಚಾವಡಿ ೧೭. ಕಬ್ಬಿಣದ ಚಾವಡಿ:** ಕಬ್ಬಿಣದ ಗಣಿಗಳು, ಕಬ್ಬಿಣ ಉಪಕರಣಗಳ ತಯಾರಿಕೆ, ವಿತರಣೆ ಇತ್ಯಾದಿಗಳಿಗೆ ಸಂಬಂಧಿಸಿದ ವ್ಯವಹಾರಗಳ ಇಲಾಖೆ ಮತ್ತು **೧೮. ಹೊಗೆಸೊಪ್ಪಿನ ಚಾವಡಿ:** ಹೊಗೆಸೊಪ್ಪು ಕೊಳ್ಳುವುದು ಮತ್ತು ಮಾರುವುದರ ಕುರಿತಾದ ಇಲಾಖೆ. ಈ ಒಂದೊಂದು ವಿಭಾಗದಲ್ಲಿಯೂ ಒಬ್ಬ ಮೇಲ್ವಿಚಾರಕ (ಗೊತ್ತುಗಾರ), ಮೂವರು ದಾಖಲೆ ಇಡುವವರು, ಗುಮಾಸ್ತರು, ಒಬ್ಬ ದಫೇದಾರ, ಊಳಿಗದವರು, ಗೊಲ್ಲ, ಕಾವಲುಗಾರ ಮತ್ತು ದೀವಟಿಗೆಯವರು ಇರುತ್ತಿದ್ದರು. ಚಾವಡಿಗಳ ಕಾರ್ಯವಿಧಾನ, ಅದಕ್ಕೆ ಸಂಬಂಧಿಸಿದ ಗೌಪ್ಯ ವಿವರಗಳನ್ನು ರಾಜನಿಗೆ ವರದಿ ಮಾಡಲು ಬೇಹುದಳ ಇರುತ್ತಿದ್ದಿತು. ಹೀಗಾಗಿ, ಇಲಾಖೆಯ ಕುಂದುಕೊರತೆಗಳನ್ನು ತಕ್ಷಣ ಸರಿಪಡಿಸಲು ಸಾಧ್ಯವಾಗುತ್ತಿದ್ದಿತು. ಈ ಕೇಂದ್ರ ಚಾವಡಿಗಳು ಸಾಕಷ್ಟು ಅಧಿಕಾರವನ್ನೂ ಹೊಂದಿದ್ದವು.

ಆನಂತರದಲ್ಲಿ ಸರ್ಕಾರದ ಉದ್ದೇಶಗಳಿಗಾಗಿ ಒಂದು ವ್ಯವಸ್ಥಿತವಾದ ಅಂಚೆ ಇಲಾಖೆ ರೂಪುಗೊಂಡಿತು. ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಆಡಳಿತಾವಧಿಯಲ್ಲಿ ಬ್ರಿಟಿಷ್ ಸರ್ಕಾರವು ೧೮೩೧ ರಲ್ಲಿ ಕಮೀಷನರ್ ಆಳ್ವಿಕೆಯನ್ನು ಜಾರಿಗೆ ತಂದಿತು. ಈ ಅವಧಿಯಲ್ಲಿ ಸರ್ ಮಾರ್ಕ್ ಕಬ್ಬನ್, ಲಾರ್ಡ್ ಬೌರಿಂಗ್ ಮೊದಲಾದವರ ಆಡಳಿತ ಚಾಣಾಕ್ಷತೆಯಿಂದಾಗಿ ಮೈಸೂರಿನ ಆಡಳಿತವು ಬಹಳಷ್ಟು ಸುಧಾರಿಸಿತು. ಸಂಸ್ಥಾನಿಕರ ಆಡಳಿತಾಧಿಕಾರ ಪ್ರಧಾನವಾದ ಮೇಲೆ (೧೮೮೧) ಕಮೀಷನರ್ ಹುದ್ದೆ ರದ್ದಾಯಿತು. ಮೈಸೂರು ಅರಮನೆಯಲ್ಲಿ ಇದ್ದ ಒಬ್ಬ ರೆಸಿಡೆಂಟ್ ಜೊತೆಯಲ್ಲಿ ನೇಮಕಗೊಂಡ ದಿವಾನರ ಹುದ್ದೆ ಹೆಚ್ಚು ಪ್ರಾಮುಖ್ಯ ಪಡೆಯಿತು. ಆದರೆ ಸೈನ್ಯ, ರೈಲ್ವೆ, ತಂತಿ, ನಾಣ್ಯ, ದಂಡು ಪ್ರದೇಶಗಳ ಮೇಲೆ ಬ್ರಿಟಿಷ್ ಹತೋಟಿ ಮುಂದುವರೆಯಿತು.

ಕಮೀಷನರ್ ನೇತೃತ್ವದ ಆಡಳಿತ ವ್ಯವಸ್ಥೆಯಲ್ಲಿ ಸ್ವತಂತ್ರವಾಗಿ ಕೆಲಸ ಮಾಡುವ ಅನೇಕ ವಿಭಾಗಗಳನ್ನು ಕಬ್ಬನ್ ಸ್ಥಾಪಿಸಿದನು. ಅವುಗಳೆಂದರೆ ಕಂದಾಯ, ಅಂಚೆ, ಆರಕ್ಷಕ ದಳ, ಲೋಕೋಪಯೋಗಿ (ಕಾಮಗಾರಿ), ಸೈನ್ಯ, ವೈದ್ಯಕೀಯ, ಜಾನುವಾರು, ನ್ಯಾಯ ಮತ್ತು ಶಿಕ್ಷಣ ಇಲಾಖೆ. ಸ್ವಾತಂತ್ರ್ಯಪೂರ್ವದ ಸಂಸ್ಥಾನಿಕರ ಆಡಳಿತ ಮತ್ತು ಬ್ರಿಟಿಷ್ ಪ್ರಾಂತ್ಯಗಳಲ್ಲಿಯ ಆಡಳಿತ ವ್ಯವಸ್ಥೆಯನ್ನು ನಮ್ಮ ರಾಜ್ಯವು ಅಳವಡಿಸಿಕೊಂಡಿತು.

೧೮೮೧ರ ಮಾರ್ಚ್ ತಿಂಗಳಲ್ಲಿ ರಾಜ್ಯದ ಆಡಳಿತವನ್ನು ರಾಜವಂಶಕ್ಕೆ ಬಿಟ್ಟುಕೊಟ್ಟಾಗ ಸಾಮಾನ್ಯ ಕಂದಾಯ ಇಲಾಖೆ, ಲೋಕೋಪಯೋಗಿ ಇಲಾಖೆ, ವಿದ್ಯಾ ಇಲಾಖೆ ಮತ್ತು ಸೈನ್ಯದಳ ಈ ನಾಲ್ಕು ಇಲಾಖೆಗಳು ಕಾರ್ಯದರ್ಶಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದವು. ಮುಂದೆ ಈ ಇಲಾಖೆಗಳು ದೊಡ್ಡದಾಗಿ ಬೆಳೆದಂತೆ ಪ್ರತ್ಯೇಕ ಇಲಾಖೆಗಳನ್ನು ಸೃಷ್ಟಿಸಿ ಅಧಿಕಾರಿಗಳನ್ನು ನೇಮಿಸಲಾಯಿತು. ಹೀಗೆ ಉಂಟಾದ ಹೊಸ ಇಲಾಖೆಗಳೆಂದರೆ– ಅರಣ್ಯ ಮತ್ತು ಶಾಂತಿಪಾಲನೆ

ಇಲಾಖೆ (೧೮೮೫), ಅಬಕಾರಿ ಇಲಾಖೆ (೧೮೯೯), ಮುಜರಾಯಿ ಇಲಾಖೆ (೧೮೯೧), ಗಣಿ ಇಲಾಖೆ(೧೮೯೪), ಕಂದಾಯ ಇಲಾಖೆ (೧೯೦೨), ವ್ಯವಸಾಯ ಇಲಾಖೆ (೧೯೧೨) ಹಾಗೂ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ (೧೯೧೩). ಭಾರತವು ಸ್ವತಂತ್ರಗೊಂಡಾಗ ಜಿಲ್ಲಾ ಕೇಂದ್ರದಲ್ಲಿ ಹಲವಾರು ಇಲಾಖಾ ಕಚೇರಿಗಳಿದ್ದು ಅವು ಇಂತಿದ್ದವು: ಜಿಲ್ಲಾ ನ್ಯಾಯಾಧೀಶ, ಜಿಲ್ಲಾ ಪೋಲೀಸ್ ಅಧೀಕ್ಷಕ, ವಲಯ ಅರಣ್ಯಾಧಿಕಾರಿ, ಕಾರ್ಯನಿರ್ವಾಹಕ ಅಭಿಯಂತರರು, ಜಿಲ್ಲಾ ವೈದ್ಯಾಧಿಕಾರಿ, ಪಾನ ನಿರೋಧ ನಿರೀಕ್ಷಕ, ಜಿಲ್ಲಾ ಮಂಡಳಿಯ ಶಾಲೆಗಳ ಆಡಳಿತಾಧಿಕಾರಿ, ಜಿಲ್ಲಾ ವ್ಯವಸಾಯ ಅಧಿಕಾರಿ, ನೈರ್ಮಲ್ಯ ಹಾಗೂ ದೇವಿ ಹಾಕುವ ಪರಿಶೀಲನಾಧಿಕಾರಿ ಕಛೇರಿ ಮುಂತಾದವು.

ಈ ಹಿನ್ನೆಲೆಯಲ್ಲಿ, ಆಡಳಿತ ನಡೆಸುವ ಜನಪರ ಸರ್ಕಾರಗಳು ಜನತೆಯ ಕಲ್ಯಾಣಕ್ಕಾಗಿ ಹೊಸ ಹೊಸ ಯೋಜನೆಗಳನ್ನು ಕಾಲಕಾಲಕ್ಕೆ ರೂಪಿಸಿ, ಅವುಗಳ ಅನುಷ್ಠಾನಕ್ಕಾಗಿ ಹೆಚ್ಚಿನ ಹೊಣೆಗಾರಿಕೆಯನ್ನು ವಿವಿಧ ಇಲಾಖೆಗಳಿಗೆ ವಹಿಸುತ್ತಾ ಬಂದಿವೆ. ಅದಕ್ಕಾಗಿ, ಅವಶ್ಯವೆನಿಸಿದಾಗ ಹೊಸ ಇಲಾಖೆಗಳನ್ನು ಸಹ ಸೃಷ್ಟಿ ಮಾಡಿ, ಯೋಜನೆಗಳನ್ನು ಅನುಷ್ಠಾನಗೊಳಿಸಿವೆ. ಸರ್ಕಾರದ ಇಂತಹ ಕೆಲವು ಮುಖ್ಯ ಇಲಾಖೆಗಳಾದ ಆರ್ಥಿಕ, ಕೃಷಿ, ಕೈಗಾರಿಕೆ, ಸಹಕಾರ, ಲೋಕೋಪಯೋಗಿ, ಕಾರ್ಮಿಕ ಮುಂತಾದವುಗಳ ಕಾರ್ಯಚಟುವಟಿಕೆ ಹಾಗೂ ಅವುಗಳು ಕೈಗೊಂಡಿರುವ ಪ್ರಗತಿಪರ ಮತ್ತು ಜನಕಲ್ಯಾಣ ಯೋಜನೆಗಳ ಬಗ್ಗೆ ಈಗಾಗಲೇ ಈ ಸಂಪುಟದ ಹಿಂದಿನ ಅಧ್ಯಾಯಗಳಲ್ಲಿ ತಿಳಿಸಲಾಗಿದೆ. ಪ್ರಸ್ತುತ, ಜಿಲ್ಲಾ ಮಟ್ಟದಲ್ಲಿನ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳು, ಮಂಡಳಿಗಳು, ನಿಗಮಗಳು ಮತ್ತು ಜಿಲ್ಲಾಧಿಕಾರಿಗಳ ನೇರ ಆಡಳಿತಕ್ಕೆ ಒಳಪಡದ ಇಲಾಖಾ ಕಚೇರಿ ಅಥವಾ ಸಂಸ್ಥೆಗಳ ಸ್ಥಾಪನೆ, ಉದ್ದೇಶ, ಅವುಗಳ ಬೆಳವಣಿಗೆಯ ವಿವಿಧ ಹಂತಗಳು ಹಾಗೂ ಕಾರ್ಯಚಟುವಟಿಕೆಗಳನ್ನು ಕುರಿತ ಸ್ಥೂಲ ಪರಿಚಯವನ್ನು ಇಲ್ಲಿ ಮಾಡಿಕೊಡಲಾಗಿದೆ.

## ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ

ಸಾರ್ವಜನಿಕ ವಿತರಣಾ ಪದ್ಧತಿಯಡಿ ನ್ಯಾಯಬೆಲೆ ಅಂಗಡಿಗಳ ಮೂಲಕ ಜಿಲ್ಲೆಯ ನಾಗರಿಕರಿಗೆ ದಿನನಿತ್ಯದ ಅಗತ್ಯ ವಸ್ತುಗಳನ್ನು ಪೂರೈಸುವ ಉದ್ದೇಶದಿಂದ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ತುಮಕೂರಿನಲ್ಲಿ ೧೯೬೭ರ ಪೂರ್ವದಲ್ಲಿ ಸ್ಥಾಪನೆಗೊಂಡಿತು. ಈ ಇಲಾಖೆಯು ಆರಂಭದಲ್ಲಿ ಸಿವಿಲ್ ಸಪ್ಲೈಸ್ ವಿಭಾಗ ಹಾಗೂ ಫುಡ್‌ಸಪ್ಲೈಸ್ ವಿಭಾಗಗಳೆಂಬ ಎರಡು ಸ್ವತಂತ್ರ ವಿಭಾಗಗಳನ್ನು ಹೊಂದಿತ್ತು. ಸಿವಿಲ್ ಸಪ್ಲೈಸ್ ವಿಭಾಗವು ಐರನ್ ಅಂಡ್ ಸ್ಟೀಲ್ ಇಲಾಖೆಗೆ ಸೇರಿತ್ತು. ಸರ್ಕಾರಿ ಆದೇಶ ಸಂಖ್ಯೆ ಎಫ್.ಎಫ್.ಡಿ:೪೯:ಇಬಿಟಿ:೬೫, ದಿ: ೧೯-೦೮-೧೯೬೭ರಲ್ಲಿ ಫುಡ್ ಸಪ್ಲೈಸ್ ಇಲಾಖೆಗೆ ವಿಲೀನಗೊಂಡಿತು. ನಂತರ ಫುಡ್‌ವಿಂಗ್ ಮತ್ತು ಸಿವಿಲ್ ಸಪ್ಲೈಸ್ ವಿಭಾಗಗಳನ್ನು ಸರ್ಕಾರಿ ಆದೇಶ ಸಂಖ್ಯೆ ಎಫ್.ಎಫ್.ಡಿ: ಇಪಿಟಿ; ೮೩; ದಿನಾಂಕ ೮-೦೩-೧೯೮೪ ರಂತೆ ರದ್ದುಪಡಿಸಿ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಎಂದು ಪುನರ್ ನಾಮಕರಣಗೊಂಡಿತು. ಪ್ರಸ್ತುತ ಈ ಇಲಾಖೆಯು ಸ್ವತಂತ್ರವಾದ ವೃಂದ ಮತ್ತು ನೇಮಕಾತಿ ನಿಯಮ ಹೊಂದಿರುತ್ತದೆ.

ಈ ಕಛೇರಿಯ ಮುಖ್ಯಸ್ಥರ ಹುದ್ದೆ ೧೯೮೪ಕ್ಕೆ ಮೊದಲು ಫುಡ್ ಅಸಿಸ್ಟೆಂಟ್ ಟು ಡೆಪ್ಯೂಟಿ ಕಮಿಷನರ್ ಎಂದಿದ್ದು, ನಂತರ ಉಪನಿರ್ದೇಶಕರು ಎಂದಾಗಿದೆ. ಉಪನಿರ್ದೇಶಕರು ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅವರಿಗೆ ಒಬ್ಬ ಸಹಾಯಕ ನಿರ್ದೇಶಕರು, ಒಬ್ಬ ವ್ಯವಸ್ಥಾಪಕರು, ಒಬ್ಬ ಲೆಕ್ಕ ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಎರಡು ಮಂದಿ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಅಧಿಕಾರಿ ಸಿಬ್ಬಂದಿ ಆಡಳಿತದಲ್ಲಿ ನೆರವಿಗಿದ್ದಾರೆ.

ಅಗತ್ಯ ವಸ್ತುಗಳ ಕಾಯಿದೆ ೧೯೫೫, ಕರ್ನಾಟಕ ಅಗತ್ಯ ವಸ್ತುಗಳ ನಿಯಂತ್ರಣ ಆದೇಶ (ಪಿ.ಡಿ.ಎಸ್ ಕಂಟ್ರೋಲರ್ ಆರ್ಡರ್) ೧೯೯೨, ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ ಕಂಟ್ರೋಲ್ ಆರ್ಡರ್ ೨೦೦೦, ಎಡಿಬಲ್ ಆಯಿಲ್ ಪ್ಯಾಕೇಜಿಂಗ್ ಆರ್ಡ್‌ರ್ ೧೯೯೮, ಮೋಟಾರ್ ಸ್ಪಿರಿಟ್ ಅಂಡ್ ಹೈಸ್ಪೀಡ್ ಡೀಸೆಲ್ (ರೆಗ್ಯೂಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಷನ್ ಆಫ್ ಪ್ರಾಕ್ಟೀಸಸ್ ಆರ್ಡರ್ ೧೯೯೮, ಕರ್ನಾಟಕ ಎಸೆನ್ಷಿಯಲ್ ರೆಗ್ಯುಲೇಷನ್ ಆಫ್

ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಅಂಡ್ ಪ್ರಿವೆನ್ಷನ್ ಆಫ್ ಮಾಲ್ ಪ್ರಾಕ್ಟೀಸ್ ಆರ್ಡರ್ ೧೯೮೮ ಮೊದಲಾದ ನಿಗದಿತ ನಿಯಮ, ಅಧಿನಿಯಮಗಳನ್ನು ಈ ಕಛೇರಿಯು ತನ್ನ ದಿನನಿತ್ಯದ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತದೆ.

ಅನೌಪಚಾರಿಕ ಪಡಿತರ ಅಧಿಕಾರಿಗಳು, ತುಮಕೂರು ನಗರದವರು ಹಾಗೂ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ೧೦ ತಾಲೂಕುಗಳಲ್ಲಿ ಆಯಾ ತಾಲೂಕು ತಹಸೀಲ್ದಾರ್ ತಮ್ಮ ತಾಲೂಕುಗಳಲ್ಲಿ ಇಲಾಖಾ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಅಧಿಕಾರಿಗಳಾಗಿರುತ್ತಾರೆ.

ಸಾರ್ವಜನಿಕ ವಿತರಣಾ ಪದ್ಧತಿಯಡಿ ಆದ್ಯತಾ ವಲಯ (Priority) ಮತ್ತು ಆದ್ಯತೇತರ ವಲಯದ (Non-Priority) ಕುಟುಂಬಗಳನ್ನು ಗುರುತಿಸಿ ಪಡಿತರ ಚೀಟಿ ಯೋಜನೆ ಜಾರಿಗೊಳಿಸುವುದು. ಪಡಿತರ ಪದಾರ್ಥಗಳಾದ ಅಕ್ಕಿ, ಗೋಧಿ, ಸಕ್ಕರೆ, ರಾಗಿ, ಖಾದ್ಯತೈಲ, ಉಪ್ಪು ಹಾಗೂ ಸೀಮೆಎಣ್ಣೆ ಮೊದಲಾದ ಅಗತ್ಯ ವಸ್ತುಗಳನ್ನು ಸಮರ್ಪಕವಾಗಿ ವಿವಿಧ ವರ್ಗಗಳ ಕಾರ್ಡುದಾರರಿಗೆ ವಿತರಿಸುವುದು, ವಿವಿಧ ವರ್ಗದ ಪಡಿತರ ಚೀಟಿಗಳಿಗೆ ಫಲಾನುಭವಿಗಳನ್ನು ಗುರುತಿಸಿ ಪಡಿತರ ಚೀಟಿ ವಿತರಿಸುವುದು, ಪಡಿತರ ಚೀಟಿ ಫಲಾನುಭವಿಯ ಕುಟುಂಬದ ಎಲ್ಲಾ ಸದಸ್ಯರ ಮಾಹಿತಿಯನ್ನು ಹಾಗೂ ಪಡಿತರ ವಸ್ತುಗಳ ಹಂಚಿಕೆ, ದಾಸ್ತಾನು, ವಿತರಣೆ ಅಂಕಿ ಸಂಖ್ಯೆಗಳನ್ನು ಗಣಕೀಕರಣಗೊಳಿಸಿ ದತ್ತಾಂಶವು ಸಾರ್ವಜನಿಕರಿಗೆ ಪಾರದರ್ಶಕವಾಗಿ ತಿಳಿಯುವಂತೆ ಕ್ರಮವಹಿಸಲಾಗುತ್ತದೆ.

ಅಗತ್ಯ ವಸ್ತುಗಳ ಕಾಯ್ದೆಯಡಿ ಅಕ್ಕಿ, ಗೋಧಿ, ಪೆಟ್ರೋಲ್, ಸೀಮೆಎಣ್ಣೆ, ಎಲ್.ಪಿ.ಜಿ. ಸಿಲಿಂಡರ್ ಮತ್ತಿತರ ಅಕ್ರಮ ದಾಸ್ತಾನುಗಳನ್ನು ವಶಪಡಿಸಿಕೊಂಡು ಕಾಯ್ದೆಯಡಿ ಪ್ರಕರಣ ದಾಖಲಿಸುವುದು, ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ನ್ಯಾಯಬೆಲೆ ಅಂಗಡಿಗಳ ಸ್ಥಾಪನೆ ಮತ್ತು ನಿಯಂತ್ರಣ, ಮುಕ್ತ ಮಾರುಕಟ್ಟೆಯಲ್ಲಿ ಅಗತ್ಯ ವಸ್ತುಗಳು ಸುಲಭ ದರದಲ್ಲಿ ಸಿಗುವಂತೆ ನಿಗಾ ವಹಿಸುವುದು, ಮತ್ತಿತರ ಕಾರ್ಯಚಟುವಟಿಕೆಗಳಲ್ಲಿ ಇಲಾಖೆಯು ತೊಡಗಿದೆ.

ಗ್ರಾಹಕರ ಹಿತರಕ್ಷಣಾ ಕಾಯಿದೆ ೧೯೮೬ರನ್ವಯ ಗ್ರಾಹಕರ ಜಾಗೃತಿ, ಹಕ್ಕು ಮತ್ತು ಶಿಕ್ಷಣ ನೀಡುವ ಬಗ್ಗೆ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ತೆರೆದು ಗ್ರಾಹಕರಿಗೆ ಅರಿವನ್ನು ಮೂಡಿಸುವುದು ಇಲಾಖೆಯ ಇತರ ಚಟುವಟಿಕೆಗಳಾಗಿದೆ.

ಕೇಂದ್ರ ಸರ್ಕಾರದ ಕನಿಷ್ಠ ಬೆಂಬಲ ಬೆಲೆ ಯೋಜನೆಯನ್ವಯ ರೈತರಿಗೆ ಬೆಳೆದ ಆಹಾರ ಧಾನ್ಯಗಳಿಗೆ ಉತ್ತಮ ದರ ದೊರಕುವಂತಾಗಲು ರಾಗಿಯನ್ನು ನಿಗದಿಪಡಿಸಿದ ದರದಂತೆ ಸಂಗ್ರಹಣೆ ಮಾಡುವುದು. ಆಯುಕ್ತರು, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಂಗಳೂರು ಹಾಗೂ ಜಿಲ್ಲಾಧಿಕಾರಿಗಳು, ತುಮಕೂರು ಜಿಲ್ಲೆ, ತುಮಕೂರು ಇವರು ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

### ಅಬಕಾರಿ ಇಲಾಖೆ

ಪಾನನಿರೋಧವನ್ನು ರದ್ದುಪಡಿಸುವುದು, ಮದ್ಯ ತಯಾರಿಕೆಗೆ ಪರವಾನಗಿ, ಮದ್ಯದ ಅಂಗಡಿಗಳ ಪರವಾನಗಿ ನೀಡಿಕೆ, ಅಬಕಾರಿ ಸುಂಕ ವಗೈರೆಗಳಿಂದ ಸರ್ಕಾರದ ರಾಜಸ್ವವನ್ನು ಹೆಚ್ಚಿಸುವ ಉದ್ದೇಶದಿಂದ ಅಕ್ಟೋಬರ್ ೧೫, ೧೯೬೭ರಲ್ಲಿ ತುಮಕೂರಿನಲ್ಲಿ ಅಬಕಾರಿ ಇಲಾಖೆಯನ್ನು ಆರಂಭಿಸಲಾಯಿತು. ಪ್ರಸ್ತುತ ಅಬಕಾರಿ ಉಪ ಆಯುಕ್ತರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಇದಕ್ಕೂ ಮೊದಲು ಈ ಹುದ್ದೆ ೧೯೭೨ರವರೆಗೆ ಅಬಕಾರಿ ಅಧೀಕ್ಷಕರು ಎಂದಾಗಿತ್ತು. ಇವರ ನೆರವಿಗೆ ಅಬಕಾರಿ ಉಪ ಅಧೀಕ್ಷಕರು, ಕಛೇರಿ ಅಧೀಕ್ಷಕರು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿಗಳಿದ್ದರು. ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ತುಮಕೂರು, ಕುಣಿಗಲ್, ಶಿರಾ, ತಿಪಟೂರು, ತುರುವೇಕೆರೆ, ಕೊರಟಗೆರೆ, ಮಧುಗಿರಿ, ಪಾವಗಡ, ಚಿಕ್ಕನಾಯಕನಹಳ್ಳಿ ಹಾಗೂ ಗುಬ್ಬಿ ಹೀಗೆ ಒಟ್ಟು ೧೧ ವಲಯ ಕಛೇರಿಗಳಿದ್ದು, ಅಬಕಾರಿ ನಿರೀಕ್ಷಕರು ಆಯಾ ವಲಯ ಕಛೇರಿಗಳ ಮುಖ್ಯಸ್ಥರಾಗಿರುತ್ತಾರೆ. ಜಿಲ್ಲೆಯ ಹತ್ತು ತಾಲೂಕುಗಳಲ್ಲೂ, ಅಬಕಾರಿ ಉಪನಿರೀಕ್ಷಕರ (ಜಾರಿ ಮತ್ತು ತನಿಖೆ) ಕಛೇರಿಗಳಿದ್ದು, ಅಬಕಾರಿ ಉಪ ನಿರೀಕ್ಷಕರು ಆಯಾ ತಾಲೂಕಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ.

## ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ

ಈ ಇಲಾಖೆಯಿಂದ ಅನುಮೋದನೆಗೊಳ್ಳುವ ವಿಭಾಗದ ವ್ಯಾಪ್ತಿಯಲ್ಲಿನ ಎಲ್ಲಾ ಕಾಮಗಾರಿಗಳ ಅನುಷ್ಠಾನ, ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಅಭಿವೃದ್ಧಿ ನಿರ್ಮಾಣ, ನವೀಕರಣ ಹಾಗೂ ನಿರ್ವಹಣೆ ಹಾಗೂ ಸೇತುವೆಗಳ ನಿರ್ಮಾಣ, ಸರ್ಕಾರಿ ಕಟ್ಟಡಗಳ ನಿರ್ಮಾಣ ಹಾಗೂ ನಿರ್ವಹಣೆ, ಇತರೆ ಇಲಾಖೆಗಳಿಂದ ಈ ವಿಭಾಗಕ್ಕೆ ವಹಿಸಿ ಮತ್ತು ಠೇವಣಿ ವಂತಿಗೆ ನೀಡಿದ ಕಾಮಗಾರಿಗಳ ಅನುಷ್ಠಾನ ಮೊದಲಾದ ಮುಖ್ಯ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ ೧೯೫೬ ರಲ್ಲಿ ಈ ಇಲಾಖೆಯು ಅಸ್ತಿತ್ವಕ್ಕೆ ಬಂದಿತು. ಕಾರ್ಯಪಾಲಕ ಇಂಜಿನಿಯರ್ ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಒಬ್ಬ ತಾಂತ್ರಿಕ ಸಹಾಯಕರು, ಒಬ್ಬ ಸಹಾಯಕ ಇಂಜಿನಿಯರ್, ಮೂವರು ಕಿರಿಯ ಇಂಜಿನಿಯರ್‌ಗಳು, ಒಬ್ಬ ಕಿರಿಯ ಇಂಜಿನಿಯರ್ (ವಿದ್ಯುತ್), ಕಛೇರಿ ಅಧೀಕ್ಷಕರು, ಒಬ್ಬ ಲೆಕ್ಕಾಧೀಕ್ಷಕರು, ಒಬ್ಬ ಪ್ರಥಮ ದರ್ಜೆ ಸಹಾಯಕ, ಒಬ್ಬ ಪ್ರಥಮ ದರ್ಜೆ ಭೂಮಾಪಕರು, ಮೂವರು ಪ್ರಥಮ ದರ್ಜೆ ಲೆಕ್ಕ ಸಹಾಯಕ ಮೊದಲಾದ ಅಧಿಕಾರಿ ಸಿಬ್ಬಂದಿಗಳು ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಇವರ ನೆರವಿಗಿದ್ದಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮ–೧೯೫೭, ಕರ್ನಾಟಕ ನಾಗರಿಕ ಸೇವಾ ವರ್ತನಾ ನಿಯಮ, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚದ ಕೈಪಿಡಿ, ಪಿಡಬ್ಲ್ಯೂಡಿ ಅಕೌಂಟ್ಸ್ 'ಎ' ಕೋಡ್, ಪಿಡಬ್ಲ್ಯೂಡಿ ಅಕೌಂಟ್ಸ್ 'ಡಿ' ಕೋಡ್, ಕರ್ನಾಟಕ ಪಾರದರ್ಶಿಕ ಅಧಿನಿಯಮ, ಮಾಹಿತಿ ಹಕ್ಕು ಅಧಿನಿಯಮ–೨೦೦೫ ಮತ್ತಿತರ ನಿಯಮ ಅಧಿನಿಯಮಗಳನ್ನು ಇಲಾಖೆಯು ತನ್ನ ದೈನಂದಿನ ಆಡಳಿತ ನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ– ತುಮಕೂರು, ಗುಬ್ಬಿ, ಕುಣಿಗಲ್, ತುರವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ, ಮಧುಗಿರಿ ಹಾಗೂ ಪಾವಗಡ ತಾಲೂಕುಗಳಲ್ಲಿದ್ದು, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಯಾ ತಾಲೂಕು ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅಧೀಕ್ಷಕ ಎಂಜಿನಿಯರ್, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ವೃತ್ತ, ಬೆಂಗಳೂರು ಇವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ

ತುಮಕೂರಿನಲ್ಲಿ ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ ೧೯೬೦–೬೧ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, ಉದ್ಯೋಗ ಮತ್ತು ತರಬೇತಿ ಇಲಾಖೆಗೆ ಸೇರಿರುತ್ತದೆ. ಉದ್ಯೋಗಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಓರ್ವ ಸಹಾಯಕ ಉದ್ಯೋಗಾಧಿಕಾರಿ, ಓರ್ವ ಪ್ರಥಮ ದರ್ಜೆ ಸಹಾಯಕ, ಓರ್ವ ದ್ವಿತೀಯ ದರ್ಜೆ ಸಹಾಯಕರು, ಓರ್ವ ಬೆರಳಚ್ಚುಗಾರರು ಮತ್ತು ಇಬ್ಬರು 'ಡಿ' ದರ್ಜೆ ಸಿಬ್ಬಂದಿಗಳಿದ್ದರು. ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ವಿದ್ಯಾರ್ಹತೆಯ ಅಭ್ಯರ್ಥಿಗಳನ್ನು ಉದ್ಯೋಗಕ್ಕಾಗಿ ನೋಂದಾಯಿಸಿಕೊಳ್ಳುವುದು, ನೋಂದಾಯಿಸಿದ ಕಾರ್ಡುಗಳನ್ನು ಮೂರು ವರ್ಷಗಳಿಗೊಮ್ಮೆ ನವೀಕರಿಸುವುದು, ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆಗೆ ಕೋರಿಕೆಯ ಮೇರೆಗೆ ನೋಂದಣಿ ಕಾರ್ಡುಗಳನ್ನು ವರ್ಗಾಯಿಸುವುದು, ನೋಂದಾಯಿಸಿದ ಕಾರ್ಡುಗಳನ್ನು ಜೀವವಹಿಯಲ್ಲಿ ಕ್ರಮಬದ್ಧವಾಗಿ ಜೋಡಿಸಿ ನಿರ್ವಹಿಸುವುದು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು, ಖಾಸಗಿ ಸಂಸ್ಥೆಗಳ ನಿಯೋಜಕರಿಂದ ಬಂದ ಬೇಡಿಕೆ ಪತ್ರಗಳಿಗೆ, ಬೇಡಿಕೆಯ ಅನುಸಾರ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಿಕೊಡುವುದು ಮತ್ತು ನಿಯೋಜಕರಿಂದ ಫಲಿತಾಂಶ ಪಡೆಯುವುದು.

ಉದ್ಯೋಗ ಮಾರುಕಟ್ಟೆ ಮಾಹಿತಿ ವಿಭಾಗಕ್ಕೆ ಸಂಬಂಧಪಟ್ಟಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಖಾಸಗಿ ಸಂಸ್ಥೆಗಳು ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಅಂಕಿ ಅಂಶಗಳ ತ್ರೈಮಾಸಿಕ ವರದಿಯನ್ನು ಪಡೆದು ಕ್ರೋಢೀಕರಿಸಿ ಮಹಾನಿರ್ದೇಶನಾಲಯ, ಉದ್ಯೋಗ ಮತ್ತು ತರಬೇತಿ ಇಲಾಖೆ, ನವದೆಹಲಿ ಮತ್ತು ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಇವರುಗಳಿಗೆ ಅಂಕಿ ಅಂಶಗಳ ವರದಿ ತಯಾರಿಸಿ ಸಲ್ಲಿಸುವುದು,

ಹೊಸ ಸಂಸ್ಥೆಗಳನ್ನು ಗುರುತಿಸಿ ನಿಯೋಜಕರ ಪಟ್ಟಿಗೆ ಸೇರಿಸುವುದು, ಉದ್ಯೋಗಾಧಿಕಾರಿಗಳು ಸಿ.ಎನ್.ವಿ ಅಡಿಯಲ್ಲಿ ಸ್ಥಾಪನೆಗಳ ಪರಿವೀಕ್ಷಣೆ ಮಾಡಿ ಖಾಸಗಿ ನಿಯೋಜಕರು ಹೆಚ್ಚಿನ ಸಂಖ್ಯೆಯಲ್ಲಿ ಅಗತ್ಯವಿರುವ ಮಾನವ ಸಂಪನ್ಮೂಲ ಪಡೆಯಲು ಮತ್ತು ಉದ್ಯೋಗಾಭಿವೃದ್ಧಿ ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಪ್ರತಿ ವರ್ಷ ಕೇಂದ್ರ ಸರ್ಕಾರದ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನೌಕರರ ಅಂಕಿ ಅಂಶಗಳನ್ನು (Census of Central Government Employees) ವರದಿ ಸಿದ್ಧಪಡಿಸಿ ಕಳುಹಿಸಲಾಗುವುದು.

ವೃತ್ತಿ ಮಾರ್ಗದರ್ಶನ ಕಾರ್ಯಕ್ರಮದಡಿಯಲ್ಲಿ ತುಮಕೂರು ಜಿಲ್ಲೆಯಲ್ಲಿ ೩೬ ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜುಗಳಲ್ಲಿ ಅಭ್ಯರ್ಥಿಗಳ ಅನುಕೂಲಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆ ಮತ್ತು ವಿವಿಧ ನೇಮಕಾತಿಗಳ ಅರ್ಹತೆಯನ್ನು ಒಳಗೊಂಡ ಬ್ಯಾನರ್ಸ್ ಮತ್ತು ಪುಸ್ತಕಗಳನ್ನು ನೀಡಲಾಗುತ್ತದೆ. ವರ್ಷಕ್ಕೆ ಒಂದು ಸಲ ಆಯಾ ಕಾಲೇಜಿನ ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ನಂತರ ಮುಂದೇನು? ಈ ವಿಷಯದ ಬಗ್ಗೆ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ನೀಡಲಾಗುವುದು.

ನಿರುದ್ಯೋಗಿಗಳಿಗೆ ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶಗಳು ಪಡೆಯುವ ನಿಟ್ಟಿನಲ್ಲಿ ಪ್ರತಿ ತ್ರೈಮಾಸಿಕಕ್ಕೆ ಒಂದರಂತೆ ವಿವಿಧ ಖಾಸಗಿ ನಿಯೋಜಕರನ್ನು ಸಂಪರ್ಕಿಸಿ ಮಿನಿ ಉದ್ಯೋಗ ಮೇಳಗಳನ್ನು ಕಛೇರಿಯ ಆವರಣದಲ್ಲಿ ಮತ್ತು ಇತರೆ ಕಾಲೇಜುಗಳ ಸಹಯೋಗದೊಂದಿಗೆ ತಾಲೂಕು ಮಟ್ಟದಲ್ಲಿ ಆಯೋಜಿಸಲಾಗುವುದು. ಕಾಲಕಾಲಕ್ಕೆ ನಡೆಯುವ Airforce and Army Recruitment Rally ಗಳ ಬಗ್ಗೆ ಮಾಹಿತಿ ಮತ್ತು ತರಬೇತಿ ನೀಡಲಾಗುವುದು. ಇತ್ತೀಚೆಗೆ ಕೆ.ವಿ.ಟಿ.ಎಸ್.ಡಿ.ಸಿ ಬೆಂಗಳೂರು ಇವರ ಸಹಯೋಗದೊಂದಿಗೆ ಮಾನವ ಸಂಪನ್ಮೂಲ ಅಭಿವೃದ್ದಿ ಕೇಂದ್ರ ಸ್ಥಾಪಿಸಿ ಇದರ ಅಡಿಯಲ್ಲಿ ನಿರುದ್ಯೋಗಿಗಳಿಗೆ ವಿವಿಧ ವೃತ್ತಿಗಳಲ್ಲಿ ಕೌಶಲ್ಯ ಅಭಿವೃದ್ದಿ (Skill Development) ಹೆಚ್ಚಿಸುವಲ್ಲಿ ನುರಿತ ಸಂಪನ್ಮೂಲ ವ್ಯಕ್ತಿಗಳಿಂದ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತದೆ.

ರಾಷ್ಟ್ರೀಯ ಉದ್ಯೋಗ ಸೇವಾ ಕೈಪಿಡಿ ಭಾಗ–I ಮತ್ತು ಭಾಗ– II (NESM Part- I and Part- II), ಉದ್ಯೋಗ ವಿನಿಮಯ ಕೇಂದ್ರಗಳ ಅಧಿನಿಯಮ ೧೯೫೯ ಮತ್ತು ನಿಯಮಗಳು ೧೯೬೦, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮೊದಲಾದವುಗಳನ್ನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಅನುಸರಿಸಲಾಗುತ್ತಿದೆ. ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಪದವಿ–ಪೂರ್ವ ಶಿಕ್ಷಣ ಇಲಾಖೆ

ಶೈಕ್ಷಣಿಕ ಚಟುವಟಿಕೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುವುದು, ವೃತ್ತಿ ಶಿಕ್ಷಣ ಕಾರ್ಯಗಳು, ಕಾಲೇಜಿನ ತಪಾಸಣೆ, ಪತ್ರಾಂಕಿತ ಅಧಿಕಾರಿಗಳ ಗೌಪ್ಯವರದಿ ಬರೆಯುವುದು, ವೇತನ ಬಿಲ್ಲುಗಳಿಗೆ ಮೇಲು ಸಹಿ ಮಾಡುವುದು, ಹೊಸದಾಗಿ ಪದವಿ–ಪೂರ್ವ ಕಾಲೇಜುಗಳನ್ನು ತೆರೆಯಲು ಅರ್ಜಿಗಳನ್ನು ಪರಿಷ್ಕರಿಸುವುದು, ಪ್ರಾಯೋಗಿಕ ಮತ್ತು ವಾರ್ಷಿಕ ಪರೀಕ್ಷೆಗಳನ್ನು ನಡೆಸುವುದು ಹಾಗೂ ಮೇಲ್ವಿಚಾರಣೆ ಮೊದಲಾದ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ ನವೆಂಬರ್ ೧೩, ೧೯೭೮ರಂದು ಪದವಿ ಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆಯು ತುಮಕೂರಿನಲ್ಲಿ ಪ್ರಾರಂಭಗೊಂಡಿತು. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಅಧೀಕ್ಷಕರು, ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಸಿಬ್ಬಂದಿ ವರ್ಗವಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ, ಅನುದಾನ ಹಾಗೂ ಅನುದಾನರಹಿತ ಕಾಲೇಜುಗಳು ಉಪನಿರ್ದೇಶಕರ ಅಧೀನದಲ್ಲಿ ಬರುತ್ತವೆ. ಆಯುಕ್ತರು ಪದವಿ ಪೂರ್ವ ಕಾಲೇಜು, ೧೮ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–೧೨ ರವರು ಈ ಕಛೇರಿಗೆ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಕೃಷಿ ಮಾರಾಟ ಇಲಾಖೆ

ಸಹಕಾರಿ ಇಲಾಖೆಯಡಿಯಲ್ಲಿ ಬರುವ ಕೃಷಿ ಮಾರಾಟ ಇಲಾಖೆಯು ಡಿಸೆಂಬರ್, ೧೯೬೦ರಂದು ಅಸ್ತಿತ್ವಕ್ಕೆ ಬಂದಿತು. ಪ್ರಸ್ತುತ ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇದಕ್ಕೆ ಪೂರ್ವದಲ್ಲಿ ೧೯೬೭ರಲ್ಲಿ ಜಿಲ್ಲಾ ಮಾರುಕಟ್ಟೆ ಅಧಿಕಾರಿ ಎಂತಲೂ, ೧೯೮೭ರ ನಂತರ ಸಹಾಯಕ ನಿರ್ದೇಶಕರಾಗಿ, ೧೯೯೪ರಲ್ಲಿ ಉಪನಿರ್ದೇಶಕರು ಎಂದು ಪುನರ್ ನಾಮಕರಣಗೊಂಡಿದೆ. ಉಪನಿರ್ದೇಶಕರ ನೆರವಿಗಾಗಿ ಇಬ್ಬರು ಪ್ರಥಮ ದರ್ಜೆ ಸಹಾಯಕರು, ಒರ್ವ ಮಾರುಕಟ್ಟೆ ಮೇಲ್ವಿಚಾರಕ ಮತ್ತಿತರ ಸಿಬ್ಬಂದಿ ವರ್ಗವಿತ್ತು.

ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಕಾರ್ಯಚಟುವಟಿಕೆಗಳ ಮೇಲ್ವಿಚಾರಣೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಹಾಗೂ ನಿರ್ದೇಶಕರ ಕಛೇರಿಯ ಸಂಪರ್ಕ ಸೇತುವೆಯಾಗಿ ಕಾರ್ಯನಿರ್ವಹಿಸುವುದು, ನಿಯಂತ್ರಿತ ಕೃಷಿ ಉತ್ಪನ್ನಗಳ ಬೆಲೆ ಕುಸಿದಾಗ ಕೇಂದ್ರ ಸರ್ಕಾರ ಘೋಷಿಸುವ ಕನಿಷ್ಠ ಬೆಲೆ ಯೋಜನೆಯಡಿ ನ್ಯಾಷನಲ್ ಅಗ್ರಿಕಲ್ಚರಲ್ ಕೋ–ಆಪ್‌ರೇಟೀವ್ ಮಾರ್ಕೆಟಿಂಗ್ ಫೆಡರೇಷನ್ (NAFED) (ನ್ಯಾಫೆಡ್‌ನವರು) ಉತ್ಪನ್ನಗಳನ್ನು ಖರೀದಿ ಮಾಡುವ ಸಂಬಂಧದ ಕೆಲಸ ನಿರ್ವಹಿಸುವುದು ಮತ್ತಿತರ ಉದ್ದೇಶಗಳನ್ನು ಹೊಂದಿದೆ. ಜಿಲ್ಲೆಯ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ನಿಯಂತ್ರಣಾಧಿಕಾರಿಯಾಗಿ ಆಡಳಿತಾತ್ಮಕ, ನಿಯಂತ್ರಣಾತ್ಮಕ ಕಾರ್ಯಗಳನ್ನು ನಿರ್ವಹಿಸುವುದು, ಕರ್ನಾಟಕ ಕೃಷಿ ಉತ್ಪನ್ನ ನಿಯಂತ್ರಣ ಮಾರುಕಟ್ಟೆ ನಿಯಮ ಮತ್ತು ಕಾಯ್ದೆಯನ್ವಯ ಸರ್ಕಾರ ಹಾಗೂ ನಿರ್ದೇಶಕರು ನೀಡುವ ಆಡಳಿತಾತ್ಮಕ ಮತ್ತು ಹಣಕಾಸಿನ ಅಧಿಕಾರವನ್ನು ಚಲಾಯಿಸುವುದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ವಸೂಲಿ ಮಾಡುವ ಮಾರುಕಟ್ಟೆ ಶುಲ್ಕದ ಬಗ್ಗೆ ಪರಿಶೀಲಿಸುವುದು ಮತ್ತು ಮಾರುಕಟ್ಟೆ ಶುಲ್ಕ ಸೋರಿಕೆ ಮತ್ತು ವಸೂಲಾತಿ ಬಗ್ಗೆ ಕಾರ್ಯದರ್ಶಿಗಳಿಗೆ ಮಾರ್ಗದರ್ಶನ ಮಾಡುವುದು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಅಧೀನ ಕಛೇರಿಗಳ ಪರಿವೀಕ್ಷಣೆ ಮಾಡುವುದು ಮತ್ತಿತರ ಕಾರ್ಯಗಳಲ್ಲಿ ತೊಡಗಿರುತ್ತದೆ.

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ) ಅಧಿನಿಯಮ ೧೯೬೬ ಹಾಗೂ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ ನಿಯಂತ್ರಣ ನಿಯಮಗಳು ೧೯೬೮, ಕೃಷಿ ಉತ್ಪನ್ನಗಳ ವರ್ಗೀಕರಣ ಮತ್ತು ಪ್ರಮಾಣೀಕರಣ ಕಾಯ್ದೆ– ೧೯೩೭, ರಾಜ್ಯ ಕೇಂದ್ರ ಉಗ್ರಾಣಗಳ ಲೈಸನ್ಸ್ ನೀಡುವ ಸಂಬಂಧದ ೧೯೬೧ರ ಕಾಯ್ದೆ ಮತ್ತು ೧೯೬೯ರ ನಿಯಮಗಳು ಮತ್ತಿತರ ನಿಯಮ ಅಧಿನಿಯಮಗಳನ್ನು ಕಛೇರಿಯ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ತುಮಕೂರು, ಮಧುಗಿರಿ, ಪಾವಗಡ, ಶಿರಾ, ಗುಬ್ಬಿ, ತಿಪಟೂರು, ಹುಳಿಯಾರ್, ತುರುವೇಕೆರೆ ಹಾಗೂ ಕುಣಿಗಲ್‌ಗಳಲ್ಲಿ ತಾಲೂಕು ಹಂತದ ಕಛೇರಿಗಳಿದ್ದು, ಕಾರ್ಯದರ್ಶಿ ಆಯಾ ತಾಲೂಕಿನ ಕಛೇರಿಯ ಮುಖ್ಯಸ್ಥರಾಗಿದ್ದು, ತಾಲೂಕು ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕೃಷಿ ಇಲಾಖೆ

ಕೃಷಿಗೆ ಪೂರಕವಾದ ಚಟುವಟಿಕೆಗಳ ಯೋಜನೆಗಳನ್ನು ತಯಾರಿಸುವುದು, ಅನುಷ್ಠಾನಗೊಳಿಸುವುದು ಹಾಗೂ ಉಸ್ತುವಾರಿ ಮಾಡುವುದು ಮತ್ತಿತರ ಉದ್ದೇಶಗಳೊಂದಿಗೆ ಪ್ರಸ್ತುತ ಜಂಟಿ ಕೃಷಿ ನಿರ್ದೇಶಕರ (ಆಗಿನ ಪದನಾಮ ಜಿಲ್ಲಾ ಕೃಷಿ ಅಧಿಕಾರಿ) ಕಛೇರಿಯು ೧೯೬೦ರಲ್ಲಿ ತುಮಕೂರಿನಲ್ಲಿ ಆರಂಭಗೊಂಡಿತು. ಜಂಟಿ ಕೃಷಿ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಜಂಟಿ ಕೃಷಿ ನಿರ್ದೇಶಕರ ನೆರವಿಗೆ ನಾಲ್ವರು ಸಹಾಯಕ ನಿರ್ದೇಶಕರು, ಓರ್ವ ಆಡಳಿತ ಅಧಿಕಾರಿ, ನಾಲ್ವರು ಕೃಷಿ ಅಧಿಕಾರಿಗಳು, ಮೂವರು ಅಧೀಕ್ಷಕರು, ಐವರು ಪ್ರಥಮ ದರ್ಜೆ ಸಹಾಯಕರು, ಐವರು ದ್ವಿತೀಯ ದರ್ಜೆ ಸಹಾಯಕರು, ಒರ್ವ ಸಹಾಯಕ ಸಾಂಖ್ಯಿಕ ಅಧಿಕಾರಿ ಮತ್ತಿತರ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಸಾದಿಲ್ವಾರು ವೆಚ್ಚ ಕೈಪಿಡಿ, ಕರ್ನಾಟಕ ವೆಚ್ಚ ಕೈಪಿಡಿ, ಕರ್ನಾಟಕ ಬಜೆಟ್ ಕೈಪಿಡಿ, ಇಲಾಖಾ ಸುತ್ತೋಲೆಗಳು, ಆದೇಶಗಳು ಮತ್ತು ಮಾರ್ಗಸೂಚಿಗಳು, ಕೀಟನಾಶಕ ಅಧಿನಿಯಮ, ಬೀಜ ನಿಯಂತ್ರಣ ಅಧಿನಿಯಮ, ರಸಗೊಬ್ಬರ ನಿಯಂತ್ರಣ ಅಧಿನಿಯಮ ಮತ್ತಿತರ ನಿಯಮಗಳನ್ನು ತನ್ನ ದೈನಂದಿನ ಕಛೇರಿ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಜಿಲ್ಲೆಯ ರೈತರಿಗೆ ಆಧುನಿಕ ಬೇಸಾಯದ ಬಗ್ಗೆ ತಾಂತ್ರಿಕ ಸಲಹೆ ನೀಡುವುದು, ಕೃಷಿ ಪರಿಕರಗಳಾದ ಬಿತ್ತನೆಯ ಬೀಜ, ರಸಗೊಬ್ಬರ, ಸಸ್ಯ ಸಂರಕ್ಷಣಾ ಔಷಧಿಗಳ ಪೂರೈಕೆ ಹಾಗೂ ಅವುಗಳ ಗುಣಮಟ್ಟದ ಬಗ್ಗೆ ಕಾಯ್ದೆಯನುಸಾರ ಕ್ರಮ ತೆಗೆದುಕೊಳ್ಳುವುದು, ರೈತರಿಗೆ ತರಬೇತಿ ನೀಡುವುದು, ಕೃಷಿ ಉತ್ಪಾದನೆ ಹೆಚ್ಚಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ನಿಗದಿಪಡಿಸುವ ಯೋಜನೆಗಳ ಅನುಷ್ಠಾನ ಇತ್ಯಾದಿ ಕಾರ್ಯಚಟುವಟಿಕೆಗಳನ್ನು ಈ ಇಲಾಖೆಯು ನಿರ್ವಹಿಸುತ್ತಿದೆ. ೨೦೦೦-೦೧ರಲ್ಲಿ ಜಿಲ್ಲೆಯ ಎಲ್ಲಾ ಹೋಬಳಿ ಕೇಂದ್ರಗಳಲ್ಲಿ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಿದ್ದು, ರೈತರಿಗೆ ಅಗತ್ಯ ಪರಿಕರ ವಿತರಣೆ, ಮಣ್ಣು ಪರೀಕ್ಷೆ ಹಾಗೂ ಬೀಜ ಪರೀಕ್ಷೆಯಂತಹ ತಾಂತ್ರಿಕ ಮಾಹಿತಿ ನೀಡಲಾಗುತ್ತಿದೆ.

ವಿವಿಧ ಯೋಜನೆ ಹಾಗೂ ಅಭಿವೃದ್ಧಿ ಚಟುವಟಿಕೆಗಳಡಿ ಹಲವಾರು ಜಿಲ್ಲಾ ಹಾಗೂ ರಾಜ್ಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳನ್ನು ಕಾರ್ಯಗತಗೊಳಿಸಲಾಗುತ್ತಿದೆ. ಕೃಷಿ ವಿಸ್ತರಣಾ ಯೋಜನೆ (ರೈತ ಸಂಪರ್ಕ ಕೇಂದ್ರ), ಸಸ್ಯ ಸಂರಕ್ಷಣಾ ಯೋಜನೆ, ರಾಷ್ಟ್ರೀಯ ಆಹಾರ ಭದ್ರತಾ ಕಾರ್ಯಕ್ರಮ (ದ್ವಿದಳ ಧಾನ್ಯಗಳು), ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, ಎಣ್ಣೆಕಾಳು ಉತ್ಪಾದನಾ ಯೋಜನೆ, ಗಿರಿಜನ ಉಪಯೋಜನೆ, ಮಣ್ಣಿನ ಸತ್ವ ಹೆಚ್ಚಿಸುವಿಕೆ, ಸಾವಯವ ಗೊಬ್ಬರ ಮುಂತಾದವು, ಕೇಂದ್ರ ಪುರಸ್ಕೃತ ಯೋಜನೆಗಳಡಿಯಲ್ಲಿ ಮೆಕ್ಕೆಜೋಳ ತೀವ್ರ ಉತ್ಪಾದನಾ ಯೋಜನೆ, ರಾಷ್ಟ್ರೀಯ ದ್ವಿದಳ ಧಾನ್ಯ ಅಭಿವೃದ್ಧಿ ಯೋಜನೆ, ಎಣ್ಣೆಕಾಳು ಉತ್ಪಾದನಾ ಯೋಜನೆ, ಹನಿ ನೀರಾವರಿ ಯೋಜನೆ ಮುಂತಾದ ಯೋಜನೆಗಳಾಗಿದ್ದವು.

ಜಂಟಿ ಕೃಷಿ ನಿರ್ದೇಶಕರ ಅಧೀನದಲ್ಲಿ ಉಪ ಕೃಷಿ ನಿರ್ದೇಶಕರು (ಉಗ್ರೇಗೌಡ ಸ್ಮಾರಕ ಜಿಲ್ಲಾ ಕೃಷಿ ತರಬೇತಿ ಕೇಂದ್ರ ಚಿಕ್ಕನಹಳ್ಳಿ, ಶಿರಾ ತಾಲೂಕು) ಈ ಕಾರ್ಯಾಲಯದಿಂದ ತುಮಕೂರು ಜಿಲ್ಲೆಯ ಎಲ್ಲಾ ಹತ್ತು ತಾಲೂಕುಗಳ ವ್ಯಾಪ್ತಿಯಲ್ಲಿರುವ ರೈತರಿಗೆ, ರೈತರ ಮಕ್ಕಳಿಗೆ ಹಾಗೂ ರೈತ ಮಹಿಳೆಯರಿಗೆ ಆಧುನಿಕ ಕೃಷಿ ತಂತ್ರಜ್ಞಾನ ಮತ್ತು ಬೇಸಾಯದ ವಿಧಾನಗಳ ಬಗ್ಗೆ ಕಾಲಿಕವಾಗಿ ತರಬೇತಿಗಳನ್ನು ಆಯೋಜಿಸಿ ಕೃಷಿಕರನ್ನು ತರಬೇತಿಗೊಳಿಸುತ್ತದೆ. ಅಲ್ಲದೆ ಈ ಕಛೇರಿಯ ವ್ಯವಸ್ಥಾಪಕರು ಬೀಜೋತ್ಪಾದನಾ ಕೇಂದ್ರ, ಚಿಕ್ಕನಹಳ್ಳಿ, ಇದರ ಉಸ್ತುವಾರಿ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ.

ಜಿಲ್ಲೆಯಲ್ಲಿ ೧೦ ತಾಲೂಕುಗಳಿದ್ದು, ತಾಲೂಕು ಮಟ್ಟದಲ್ಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗಳಿದ್ದು, ಸಹಾಯಕ ಕೃಷಿ ನಿರ್ದೇಶಕರು ಆಯಾ ತಾಲೂಕಿನ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ, ಎಲ್ಲಾ ವಿಧವಾದ ಕೃಷಿ ಕಾರ್ಯಕ್ರಮಗಳನ್ನು ತಾಲೂಕು ಮತ್ತು ಹೋಬಳಿ ಮಟ್ಟದಲ್ಲಿ ಕೃಷಿ ಅಧಿಕಾರಿ/ಸಹಾಯಕ ಕೃಷಿ ಅಧಿಕಾರಿಗಳ ನೇತೃತ್ವದ ರೈತ ಸಂಪರ್ಕ ಕೇಂದ್ರಗಳ ಮೂಲಕ ಹಾಗೂ ಗ್ರಾಮಮಟ್ಟಗಳಲ್ಲಿ ಆಯೋಜಿಸಿ ನಿರ್ವಹಿಸಲು ಕ್ರಮಕೈಗೊಳ್ಳುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು, ತುಮಕೂರು ಇವರು ಕೃಷಿ ಬೀಜೋತ್ಪಾದನಾ ಕೇಂದ್ರ, ಹಿರೇಹಳ್ಳಿ, ತುಮಕೂರು ತಾ॥ ಇದರ ಉಸ್ತುವಾರಿ ಮತ್ತು ನಿಯಂತ್ರಣ ಅಧಿಕಾರ ಹೊಂದಿರುತ್ತಾರೆ.

ಕೃಷಿ ಅಧಿಕಾರಿ, ಮಣ್ಣು ಆರೋಗ್ಯ ಕೇಂದ್ರ, ತುಮಕೂರು, ಇದು ಜಿಲ್ಲಾ ಮಟ್ಟದಲ್ಲಿರುವ ಏಕೈಕ ಕಛೇರಿಯಾಗಿದ್ದು, ಕೃಷಿಕರ ಭೂಮಿಗಳಲ್ಲಿನ ಮಣ್ಣು ಮಾದರಿಗಳನ್ನು ವಿಶ್ಲೇಷಿಸುವ, ಅವರ ಭೂಮಿಗಳಲ್ಲಿ ಇರುವ ಬಾವಿಗಳ ನೀರನ್ನು ವಿಶ್ಲೇಷಿಸುವ ಮತ್ತು ಅವುಗಳ ವಿಶ್ಲೇಷಣೆಗಳಿಂದ ಕಂಡುಬರುವ ಗುಣಾವಗುಣಗಳ ಬಗ್ಗೆ ಫಲಿತಾಂಶಗಳ ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ತಾಲೂಕಿನ ಸಹಾಯಕ ಕೃಷಿ ನಿರ್ದೇಶಕರಿಗೆ ಕಳುಹಿಸಿಕೊಡುತ್ತಾರೆ. ತುಮಕೂರು ತಾಲೂಕಿನ ಹಿರೇಹಳ್ಳಿ ಮತ್ತು ಶಿರಾ ತಾಲೂಕಿನ ಚಿಕ್ಕನಹಳ್ಳಿಯಲ್ಲಿರುವ ಕೃಷಿ ಬೀಜೋತ್ಪಾದನಾ ಕೇಂದ್ರಗಳು ಬೀಜೋತ್ಪಾದನೆಗೆ ಸಾಕಷ್ಟು ಕೃಷಿ ಭೂಮಿ ಹಾಗೂ ಕೊಳವೆ ಬಾವಿಗಳನ್ನು ಹೊಂದಿದ್ದು, ಬಿತ್ತನೆ ಬೀಜಗಳ ಉತ್ಪತ್ತಿ ಮಾಡುತ್ತವೆ. ಉತ್ಪತ್ತಿಗೊಳಿಸಲಾದ ಬಿತ್ತನೆ ಬೀಜದ ದಾಸ್ತಾನನ್ನು ಜಿಲ್ಲೆಯ ರೈತ ಸಮೂಹಕ್ಕೆ ಅಗತ್ಯವಾದ ಸಮಯದಲ್ಲಿ ಬಿತ್ತನೆ ಬೀಜಗಳ ಪೂರೈಕೆ ಮಾಡಿ ಕೃಷಿಕ ಸಮುದಾಯದ ಸೇವೆ ಸಲ್ಲಿಸುತ್ತವೆ. ಕೃಷಿ ಆಯುಕ್ತರು, ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಖಜಾನೆ

ಆರ್ಥಿಕ ಇಲಾಖೆಗೆ (ಖಜಾನೆ ನಿರ್ದೇಶನಾಲಯ) ಸೇರಿದ ಖಜಾನೆ ಇಲಾಖೆ ತುಮಕೂರಿನಲ್ಲಿ ೧೯೬೪ರಲ್ಲಿ ಆರಂಭಗೊಂಡಿತು. ಜಿಲ್ಲಾ ಖಜಾನಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾಧಿಕಾರಿಗಳ ಅಧೀನದಲ್ಲಿದ್ದರು. ಆದರೆ ೧೯೬೪ರಲ್ಲಿ ಈ ಹೆಚ್ಚುವರಿ ಜವಾಬ್ದಾರಿಯಿಂದ ಜಿಲ್ಲಾಧಿಕಾರಿಗಳನ್ನು ಮುಕ್ತಗೊಳಿಸಲಾಯಿತು ಹಾಗೂ ಜಿಲ್ಲಾ ಖಜಾನಾಧಿಕಾರಿಗಳಿಗೆ ಜಿಲ್ಲಾ ಖಜಾನೆಗೆ ಸಂಬಂಧಿಸಿದಂತೆ ಪರಮಾಧಿಕಾರ ನೀಡಲಾಯಿತು. ಜಿಲ್ಲಾ ಖಜಾನಾಧಿಕಾರಿಗಳಿಗೆ ನೆರವಾಗಲು ಸಹಾಯಕ ಖಜಾನಾಧಿಕಾರಿಗಳು, ಮುಖ್ಯ ಲೆಕ್ಕಿಗ, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಮತ್ತಿತರ ಅಧಿಕಾರಿ ಸಿಬ್ಬಂದಿ ವರ್ಗವಿದೆ.

ರಾಜ್ಯ ಸರ್ಕಾರಿ ನೌಕರರ ವೇತನದ ಬಿಲ್ಲುಗಳು, ವಿವಿಧ ಕಛೇರಿಗಳ ಸಾದಿಲ್ವಾರು, ಸಂಕ್ಷಿಪ್ತ ಸಾದಿಲ್ವಾರು, ಪಿಂಚಣಿ ಪ್ರಾಪ್ತಿ, ವೃದ್ಧಾಪ್ಯವೇತನ, ಡಿ.ಡಬ್ಲ್ಯೂ.ಪಿ, ಪಿಹೆಚ್‌ಪಿ ಮತ್ತು ಸಂಧ್ಯಾ ಸುರಕ್ಷಾ ಪಿಂಚಣಿ ಪ್ರಾಪ್ತಿ ಮತ್ತು ಒಂಬತ್ತು ಉಪ ಖಜಾನೆಗಳಿಂದ ಬಂದ ದೈನಂದಿನ ಲೆಕ್ಕಗಳನ್ನು ಲೆಕ್ಕ ಮಾಡಿ ಮಾಹೆಯ ಅಂತ್ಯದಲ್ಲಿ ಮಹಾಲೇಖಪಾಲರು, ಬೆಂಗಳೂರು ಅವರಿಗೆ ಪ್ರತಿ ತಿಂಗಳು, ೧೦ನೇ ತಾರೀಖಿನೊಳಗೆ ಕಳುಹಿಸಿಕೊಡುವುದು ಮತ್ತಿತರ ಧ್ಯೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳನ್ನು ಹೊಂದಿದೆ. ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ, ಆಯವ್ಯಯ ಕೈಪಿಡಿ, ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕಾರ್ಯಚಟುವಟಿಕೆಗಳಲ್ಲಿ ಅನುಸರಿಸುತ್ತಿದೆ.

ಜಿಲ್ಲೆಯ ಪ್ರತಿ ತಾಲೂಕಿನಲ್ಲಿಯೂ ಉಪ ಖಜಾನೆಗಳಿದ್ದು, ಉಪ ಖಜಾನೆಾಧಿಕಾರಿಗಳು ಆಯಾ ತಾಲೂಕಿನ ಉಪ ಖಜಾನೆಗಳ ಮುಖ್ಯಸ್ಥರಾಗಿದ್ದು, ತಾಲೂಕು ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ತಾಲೂಕಿನ ವಿವಿಧ ಇಲಾಖೆಗಳಿಂದ ಉಪ ಖಜಾನೆಗೆ ಸಲ್ಲಿಸಿದ ವೇತನ ಹಾಗೂ ಪಿಂಚಣಿ ಬಿಲ್ಲುಗಳ ಪ್ರಾಪ್ತಿ, ಸಂಧ್ಯಾ ಸುರಕ್ಷಾ ಯೋಜನೆ, ಅಂಗವಿಕಲರ ವೇತನ, ವೃದ್ಧಾಪ್ಯ ವೇತನ, ಡಿ.ಡಬ್ಲ್ಯೂ.ಪಿ ಪಿಂಚಣಿಗಳ ಪ್ರಾಪ್ತಿ, ಭದ್ರತಾ ಕೋಣೆಯ ನಿರ್ವಹಣೆ, ಭದ್ರತಾ ಕೋಣೆಯಲ್ಲಿ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಸುರಕ್ಷತೆಗಾಗಿ ಮತ್ತು ಎಲ್ಲಾ ಮುಜರಾಯಿ ದೇವಸ್ಥಾನಗಳ ದೇವರುಗಳ ಒಡವೆಗಳನ್ನು ಸುರಕ್ಷತೆ ಹಾಗೂ ಇತರೆ ಇಲಾಖೆಗಳ ಬೆಲೆ ಬಾಳುವ ವಸ್ತುಗಳ ಸುರಕ್ಷತೆಗಾಗಿ ಭದ್ರತಾ ಕೋಣೆಯಲ್ಲಿಟ್ಟು ನಿರ್ವಹಿಸುವುದು ಮೊದಲಾದ ಕಾರ್ಯಗಳನ್ನು ನಿರ್ವಹಿಸುತ್ತವೆ. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು ರವರು ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಜಿಲ್ಲೆಯ ಎಲ್ಲಾ ಸರ್ಕಾರಿ ಹಾಗೂ ಸರ್ಕಾರೇತರ ಕಛೇರಿಗಳಲ್ಲಿ ಕನ್ನಡ ಭಾಷೆಯ ಬಳಕೆ, ಸಂಸ್ಕೃತಿ ಪ್ರಚಾರ ಮತ್ತು ಕನ್ನಡ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ತುಮಕೂರಿನಲ್ಲಿ ದಿ:೨೮-೦೭-೧೯೭೮ರಿಂದ ಕಾರ್ಯನಿರ್ವಹಿಸುತ್ತಿದೆ. ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ.

ಕನ್ನಡ ಅಭಿವೃದ್ಧಿ ಕಾರ್ಯಕ್ರಮದಡಿ ಸರ್ಕಾರಿ ನೌಕರರಿಗೆ, ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡ ತರಬೇತಿ, ನ್ಯಾಯಾಲಯದಲ್ಲಿ ಕನ್ನಡ ಬಳಕೆ ತರಬೇತಿ, ಕನ್ನಡೇತರರಿಗೆ ಕನ್ನಡ ಕಲಿಸುವುದು, ಜಿಲ್ಲೆಯ ಕಲಾವಿದರನ್ನು ಗುರುತಿಸುವುದು, ಜಿಲ್ಲಾ ಮಟ್ಟದಲ್ಲಿ ಸಾಂಸ್ಕೃತಿಕ ಚಟುವಟಿಕೆ ಮತ್ತು ವಿಚಾರ ಸಂಕೀರ್ಣಗಳನ್ನು ಏರ್ಪಡಿಸುವುದು, ವಿಶೇಷ ಘಟಕ ಯೋಜನೆಯಡಿ ಕಲಾವಿದರನ್ನು ಪ್ರೋತ್ಸಾಹಿಸುವುದು, ತಾಲೂಕಿಗೆ ಒಂದರಂತೆ ಬಯಲು ರಂಗಮಂದಿರ ನಿರ್ಮಿಸುವ ಪ್ರಕ್ರಿಯೆಯಲ್ಲಿ ಧನಸಹಾಯ ಒದಗಿಸುವುದು ಮತ್ತಿತರ ಕಾರ್ಯ ಚಟುವಟಿಕೆಗಳನ್ನು ಈ ಕಾರ್ಯಾಲಯ ನಡೆಸುತ್ತದೆ. ಕಲಾವಿದರ, ಸಾಹಿತಿಗಳ ವೈದ್ಯಕೀಯ ವೆಚ್ಚ ಮರುಪಾವತಿ, ಪರಿಶಿಷ್ಟ ಜಾತಿ/ಪಂಗಡದ ಕಲಾವಿದರಿಗೆ ತಮ್ಮ ಕಲೆಯನ್ನು ಪ್ರದರ್ಶಿಸಲು ಧನಸಹಾಯ ಮಾಡುವುದು, ಸ್ಥಳೀಯ ಕಲಾವಿದರಿಗೆ ಕಾರ್ಯಕ್ರಮಗಳನ್ನು ನೀಡಲು ಅವಕಾಶ ಮಾಡಿಕೊಡುವುದು, ಅದಕ್ಕಾಗಿ ಸಂಭಾವನೆ ನೀಡುವುದು, ಜನಪದ ಕಲಾವಿದರಿಗೆ ಗೌರವಧನ ಹಾಗೂ ಮಾಸಾಶನ

ದೊರಕಿಸಿ ಕೊಡುವುದು, ಬಾಲ ಪ್ರತಿಭೆ, ಕಿಶೋರ ಪ್ರತಿಭಾ ಸ್ಪರ್ಧೆ, ಯುವ ಪ್ರತಿಭಾ ಕಾರ್ಯಕ್ರಮ, ಪುಸ್ತಕ ಮಾರಾಟ ಮುಂತಾದ ಚಟುವಟಿಕೆಗಳನ್ನು ಈ ಕಛೇರಿ ಕಾರ್ಯಗತಗೊಳಿಸುತ್ತದೆ. ಸದರಿ ಕೆಲಸ ಕಾರ್ಯಗಳಲ್ಲಿ ಸಹಾಯಕ ನಿರ್ದೇಶಕರಿಗೆ ನೆರವಾಗಲು ಓರ್ವ ಹಿರಿಯ ಎಲೆಕ್ಟ್ರಿಷಿಯನ್ ಕಂ (ಜೊತೆಗೆ) (Cum) ಸೌಂಡ್ ಸೂಪರ್‌ವೈಸರ್ (ಜಿಲ್ಲಾ ರಂಗಮಂದಿರದ ಕಾರ್ಯವ್ಯಾಪ್ತಿಯಲ್ಲಿ), ಓರ್ವ ದ್ವಿತೀಯ ದರ್ಜೆ ಸಹಾಯಕರ ಜೊತೆಗೆ ಬೆರಳಚ್ಚುಗಾರ, ಓರ್ವ ದ್ವಿತೀಯ ದರ್ಜೆ ಸಹಾಯಕ (ರಂಗಮಂದಿರ) ಹಾಗೂ ಓರ್ವ ದಲಾಯಿತಾ ('ಡಿ' ದರ್ಜೆ ನೌಕರ) ಸೇರಿದಂತೆ ಒಟ್ಟು ನಾಲ್ಕು ಮಂದಿ ಸಿಬ್ಬಂದಿ ವರ್ಗವಿತ್ತು.

ಕಛೇರಿ ಕೆಲಸ ಕಾರ್ಯಗಳಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಕರ್ತವ್ಯ ನಿರ್ವಹಣೆಯಲ್ಲಿ ಪಾಲಿಸುತ್ತಿದೆ. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಕನ್ನಡ ಭವನ, ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಜಲಾನಯನ ಅಭಿವೃದ್ಧಿ ಇಲಾಖೆ

ಜಲಾನಯನ ಪ್ರದೇಶದಲ್ಲಿ ಬರುವ ಜನರ ಜೀವನ ಮಟ್ಟ ಸುಧಾರಣೆ ಮಾಡುವುದು, ಬಡತನ ನಿವಾರಣೆ, ಕೃಷಿ ಭೂಮಿಯ ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಹೆಚ್ಚಿಸುವುದು, ನೈಸರ್ಗಿಕ ಸಂಪನ್ಮೂಲಗಳ ಮಟ್ಟವನ್ನು ಹೆಚ್ಚಿಸುವುದು, ಸ್ಥಳೀಯ ಸಂಸ್ಥೆಗಳ ಶಕ್ತಿ ಸಾಮರ್ಥ್ಯವನ್ನು ಹೆಚ್ಚಿಸುವುದು, ನೈಸರ್ಗಿಕ ಸಂಪನ್ಮೂಲಗಳನ್ನು ಸುಸ್ಥಿರ ಅಭಿವೃದ್ಧಿ ಪಡಿಸಿ, ಅವರೇ ಸಂರಕ್ಷಿಸುವಂತೆ ಮಾಡುವುದು, ಮತ್ತಿತರ ಮುಖ್ಯ ಉದ್ದೇಶಗಳೊಂದಿಗೆ ಈ ಇಲಾಖೆಯು ಜಿಲ್ಲೆಯಲ್ಲಿ ಆರಂಭಗೊಂಡಿತು. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ಈ ಇಲಾಖೆಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಪರಮಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಕೃಷಿ ಅಧಿಕಾರಿ (ತಾಂತ್ರಿಕ ಅಧಿಕಾರಿ), ಆಡಳಿತ ಸಹಾಯಕರು, ಅಧೀಕ್ಷಕರು, ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ನಕ್ಷೆಗಾರರು, ರೇಖಾಗಾರರು, ಮೊದಲಾದ ಅಧಿಕಾರಿ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ರಾಜ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಭೂ ಅಭಿವೃದ್ಧಿ ಕಾಯಿದೆ ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ಕಛೇರಿಯ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಬರಪೀಡಿತ ಪ್ರದೇಶಾಭಿವೃದ್ಧಿ ಕಾರ್ಯಕ್ರಮ (ಡಿ.ಪಿ.ಎ.ಪಿ) ಹರಿಯಾಲಿ ಯೋಜನೆ; ಸಮಗ್ರ ಬಂಜರು ಭೂಮಿ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಜಲಾನಯನ ಅಭಿವೃದ್ಧಿ ಯೋಜನೆ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ನಬಾರ್ಡ್ ಜಲಾನಯನ ಅಬಿವೃದ್ಧಿ ಯೋಜನೆ ಹಾಗೂ ಬತ್ತಿಹೋದ ತೆರೆದ ಬಾವಿಗಳ ಜಲಮರುಪೂರಣ ಯೋಜನೆಗಳು ತುಮಕೂರು ಜಿಲ್ಲೆಯಾದ್ಯಂತ ಆಚರಣೆಯಲ್ಲಿರುವ ಜಲಾನಯನ ಅಭಿವೃದ್ಧಿ ಯೋಜನೆಗಳಾಗಿವೆ. ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳ ಅಧೀನದಲ್ಲಿ ಸಹಾಯಕ ಕೃಷಿ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತುಮಕೂರು ವಿಭಾಗ ಇದ್ದು, ಇದರ ವ್ಯಾಪ್ತಿಯಲ್ಲಿ ತುಮಕೂರು, ಕುಣಿಗಲ್, ಗುಬ್ಬಿ, ತುರುವೇಕೆರೆ, ತಿಪಟೂರು ಹಾಗೂ ಚಿಕ್ಕನಾಯಕನಹಳ್ಳಿ ತಾಲೂಕುಗಳು ಬರುತ್ತವೆ. ಈ ತಾಲೂಕುಗಳಲ್ಲಿ ತಾಲೂಕು ಜಲಾನಯನ ಅಭಿವೃದ್ಧಿ ಅಧಿಕಾರಿಗಳಿದ್ದು, ಆಯಾ ತಾಲೂಕಿನ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಸಹಾಯಕ ಕೃಷಿ ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ, ಮಧುಗಿರಿ ವಿಭಾಗ ಇದರ ವ್ಯಾಪ್ತಿಯಲ್ಲಿ ಮಧುಗಿರಿ, ಕೊರಟಗೆರೆ, ಪಾವಗಡ ಹಾಗೂ ಶಿರಾ ತಾಲೂಕುಗಳು ಬರುತ್ತವೆ. ಈ ತಾಲೂಕುಗಳಲ್ಲಿ ತಾಲೂಕು ಜಲಾನಯಾನ ಅಭಿವೃದ್ಧಿ ಅಧಿಕಾರಿಗಳಿದ್ದು, ಆಯಾ ತಾಲೂಕಿನ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಜಲಾನಯನ ಅಭಿವೃದ್ಧಿ ಇಲಾಖೆ ತುಮಕೂರು ಕಛೇರಿಯಿದ್ದು, ಜಿಲ್ಲೆಯ ಎಲ್ಲಾ ಹತ್ತು ತಾಲೂಕುಗಳ ಕಾರ್ಯವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅಲ್ಲದೆ ಸಹಾಯಕ ತೋಟಗಾರಿಕಾ ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ತುಮಕೂರು, ಕಛೇರಿಯಿದ್ದು, ಸಹಾಯಕ ತೋಟಗಾರಿಕಾ ಅಧಿಕಾರಿಗಳು-೨ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲೆಯ ೧೦ ತಾಲೂಕುಗಳ ಕಾರ್ಯ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು-೫೬೦೦೦೯, ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ

ಜಿಲ್ಲಾ ಕೈಗಾರಿಕಾ ಕೇಂದ್ರವು ೧೯೭೮ರಲ್ಲಿ ತುಮಕೂರಿನಲ್ಲಿ ಪ್ರಾರಂಭಗೊಂಡಿತು. ಇದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದೆ. ಜಂಟಿ ನಿರ್ದೇಶಕರು, ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುತ್ತಾರೆ ಹಾಗೂ ಇವರ ನೆರವಿಗಾಗಿ ಒಬ್ಬ ಉಪನಿರ್ದೇಶಕರು, ಇಬ್ಬರು ಸಹಾಯಕ ನಿರ್ದೇಶಕರು, ಕೈಗಾರಿಕಾ ಉತ್ತೇಜನಾಧಿಕಾರಿ, ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರು, ಬೆರಳಚ್ಚುಗಾರರು ಹಾಗೂ ಶೀಘ್ರಲಿಪಿಗಾರರು ಹಾಗೂ ಪ್ರತಿ ತಾಲೂಕಿಗೆ ಒಬ್ಬರಂತೆ ಕೈಗಾರಿಕಾ ವಿಸ್ತರಣಾಧಿಕಾರಿಗಳನ್ನು ಹೊಂದಿದೆ.

ಇಲಾಖೆಯಿಂದ ವಿದ್ಯಾವಂತ ನಿರುದ್ಯೋಗಿ ಯುವಕ/ಯುವತಿಯರಿಗೆ ಹಾಗೂ ಇತರೆ ಭಾವಿ ಕೈಗಾರಿಕೋದ್ಯಮಿಗಳು ಉದ್ದಿಮೆ ಸ್ಥಾಪಿಸಲು ಆಸಕ್ತಿವುಳ್ಳವರಿಗೆ ತಾಂತ್ರಿಕ ಸಲಹೆ, ಉದ್ಯಮ ಶೀಲತಾ ತರಬೇತಿ, ಹಾಗೂ ಹಣಕಾಸು ಸಂಸ್ಥೆಗಳ ಮೂಲಕ ಉದ್ದಿಮೆ ಸ್ಥಾಪನೆಗಾಗಿ ಅವಶ್ಯವಿರುವ ಅಲ್ಪಾವಧಿ ಹಾಗೂ ದೀರ್ಘಾವಧಿ ಸಾಲ ಸೌಲಭ್ಯ ಪಡೆಯಲು ಶಿಫಾರಸ್ಸು ಮಾಡಲಾಗುತ್ತಿದೆ. ಈ ವ್ಯವಸ್ಥೆಗಾಗಿ ಕಛೇರಿಯಿಂದ ಉದ್ದಿಮೆದಾರರ ಜ್ಞಾಪನ ವಿವರಣಾ ಪತ್ರ–೧ (ತಾತ್ಕಾಲಿಕ ನೋಂದಣಿ ಪ್ರಮಾಣ ಪತ್ರ) ಹಾಗೂ ಉದ್ದಿಮೆದಾರರ ಜ್ಞಾಪನ ವಿವರಣಾ ಪತ್ರ–೨ (ಶಾಶ್ವತ ನೋಂದಣಿ ಪ್ರಮಾಣ ಪತ್ರ) ನೀಡುವುದು, ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಯ ಮುಖಾಂತರ ಅವಶ್ಯವಿರುವ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ನಿವೇಶನ/ಮಳಿಗೆಗಳ ಮಂಜೂರಾತಿ, ಭೂಮಿ, ವಿದ್ಯುತ್ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಸವಿವರವಾಗಿ ವಿವಿಧ ಕಛೇರಿಯ ಮುಖ್ಯಸ್ಥರನ್ನೊಳಗೊಂಡ ಜಿಲ್ಲಾ ಮಟ್ಟದ ಏಕ ಗವಾಕ್ಷಿ ಸಮಿತಿ ಸಭೆಗಳನ್ನು ನಡೆಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮವಹಿಸಲಾಗುತ್ತಿದೆ.

೨೦೧೪–೧೯ರ ಹೊಸ ಕೈಗಾರಿಕಾ ನೀತಿಯನ್ವಯ ರೂಪುರೇಷೆಗಳನ್ನು ಭಾವಿ ಕೈಗಾರಿಕೋದ್ಯಮಿಗಳಿಗೆ ಸರ್ಕಾರದ ನೀತಿ ನಿಯಮದಡಿ ಒದಗಿಸಬಹುದಾದ ರಿಯಾಯಿತಿ ಮತ್ತು ಪ್ರೋತ್ಸಾಹಗಳ ಬಗ್ಗೆ ಅರಿವು ಮೂಡಿಸುವ ಉದ್ದಿಮೆ ಶೀಲತಾ ಜಾಗೃತಿ ಶಿಬಿರಗಳನ್ನು ಹೋಬಳಿ ಮಟ್ಟ ಹಾಗೂ ತಾಲೂಕು ಮಟ್ಟದಲ್ಲಿ ನಡೆಸಿ ಕೈಗಾರಿಕೆ ಬೆಳವಣಿಗೆಯ ಬಗ್ಗೆ ಎಲ್ಲಾ ರೀತಿಯ ಸಹಕಾರಗಳನ್ನು ಒದಗಿಸಲಾಗುತ್ತಿದೆ. ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆಯಾದ ಪ್ರಧಾನ ಮಂತ್ರಿಗಳ ಉದ್ಯೋಗ ಸೃಜನ ಯೋಜನೆ (PMEGP), ಕರ್ನಾಟಕ ಸರ್ಕಾರದ ಕರ್ನಾಟಕ ಸ್ವಯಂ ಉದ್ಯೋಗ ಯೋಜನೆ (KSES) ಹಾಗೂ ರಾಜ್ಯ ಸರ್ಕಾರದ ಯೋಜನೆಗಳಾದ ವಿಶೇಷ ಘಟಕ ಯೋಜನೆ (SCSP) ಮತ್ತು ಗಿರಿಜನ ಉಪಯೋಜನೆ (TSP), ಗ್ರಾಮೀಣ ಕುಶಲ ಕರ್ಮಿಗಳಿಗೆ ವಸತಿ ಕಾರ್ಯಾಗಾರಗಳ ನಿರ್ಮಾಣ ಮಾಡಲು ಅವಶ್ಯವಿರುವ ಪ್ರೋತ್ಸಾಹ ಧನ, ಕೈಗಾರಿಕೋದ್ಯಮಿಗಳು ಅವರ ಕೈಗಾರಿಕೆಗಳನ್ನು ಸ್ಥಾಪಿಸಲು ಹೂಡುವ ಬಂಡವಾಳನ್ನಾಧರಿಸಿ ಸಹಾಯಧನ, ಪ್ರವೇಶ ತೆರಿಗೆ ವಿನಾಯಿತಿ, ಸ್ಟಾಂಪ್ ಶುಲ್ಕ ವಿನಾಯಿತಿ, ವಿದ್ಯುತ್ ಶುಲ್ಕ ವಿನಾಯಿತಿ ಮತ್ತಿತರ ಮುಖ್ಯ ಧೇಯೋದ್ದೇಶಗಳು ಹಾಗೂ ಕಾರ್ಯ ಚಟುವಟಿಕೆಗಳೊಂದಿಗೆ ಕೆ.ಎಸ್.ಎಸ್.ಐ.ಡಿ.ಸಿ., ಕೆ.ಐ.ಎ.ಡಿ.ಬಿ., ಕೆ.ಎಸ್.ಎಫ್.ಸಿ. ಹಾಗೂ ಖಾದಿ ಗ್ರಾಮೋದ್ಯೋಗ ಮಂಡಳಿ ಹಾಗೂ ವಿವಿಧ ಕೈಗಾರಿಕಾ ಸಂಘ / ನಿಗಮಗಳ ಸಹಯೋಗಗಳೊಂದಿಗೆ ಜಿಲ್ಲಾ ಕೇಂದ್ರದಲ್ಲಿ ಕಛೇರಿಯು ಕರ್ತವ್ಯ ನಿರ್ವಹಿಸುತ್ತಿದೆ.

ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ, ಆಯವ್ಯಯ ಕೈಪಿಡಿ ಮುಂತಾದ ನಿಯಮ ಅಧಿನಿಯಮಗಳನ್ನು ಕಛೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅಳವಡಿಸಿಕೊಂಡು ಕಾರ್ಯ ನಿರ್ವಹಿಸುತ್ತಿದೆ. ಆಯುಕ್ತರು, ಕೈಗಾರಿಕಾಭಿವದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬೆಂಗಳೂರು ರವರು ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ.

## ಸಣ್ಣ ನೀರಾವರಿ ಇಲಾಖೆ

ನೀರಾವರಿ ಕ್ಷೇತ್ರವನ್ನು ಹೆಚ್ಚಿಸಲು ರೈತರಿಗೆ ಸೂಕ್ತ ರೀತಿಯಲ್ಲಿ ನೀರಾವರಿ ಸೌಲಭ್ಯಗಳನ್ನು ಕಲ್ಪಿಸುವುದು, ಬರ ಮತ್ತು ಪ್ರವಾಹಗಳಂತಹ ಪರಿಸ್ಥಿತಿಗಳನ್ನು ಪರಿಣಾಮಕಾರಿಯಾಗಿ ಎದುರಿಸುವುದು ಮತ್ತಿತರ ಮುಖ್ಯ ಧ್ಯೇಯೋದ್ದೇಶಗಳೊಂದಿಗೆ

ಈ ಇಲಾಖೆ ದಿ: ೧೦-೦೫-೧೯೮೮ ರಲ್ಲಿ ಆರಂಭಗೊಂಡಿತು. ಕಾರ್ಯಪಾಲಕ ಇಂಜಿನಿಯರ್‌ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಇಬ್ಬರು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು, ಮೂವರು ಪ್ರಥಮ ದರ್ಜೆ ಸಹಾಯಕರು, ಆರು ಮಂದಿ ದ್ವಿತೀಯ ದರ್ಜೆ ಸಹಾಯಕರು, ಮತ್ತಿತರ ಸಿಬ್ಬಂದಿ ವರ್ಗವಿದೆ. ಲೋಕೋಪಯೋಗಿ ಇಲಾಖೆಯ ಸಂಹಿತೆಗಳು, ಲೋಕೋಪಯೋಗಿ ಲೆಕ್ಕ ಸಂಹಿತೆಗಳು, ಕರ್ನಾಟಕ ನೀರಾವರಿ ಕಾಯಿದೆ, ಕರ್ನಾಟಕ ನೀರಾವರಿ ನಿಯಮ-೧೯೬೫ (ನೀರಿನ ಕರ ವಿಧಿಸುವುದು), ನೀರಾವರಿ ಕೈಪಿಡಿ-೧೯೭೪, ಭೂ ಸ್ವಾಧೀನ ಕಾಯಿದೆ, ಆರ್ಬಿಟ್ರೇಷನ್ ಕಾಯಿದೆ, ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಉಗ್ರಾಣ ಕೈಪಿಡಿ, ಕರ್ನಾಟಕ ಟ್ರಾನ್ಸ್‌ಪರೆನ್ಸಿ ಕಾಯಿದೆ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ತುಮಕೂರು ಸಣ್ಣ ನೀರಾವರಿ ವಿಭಾಗವು ಜಿಲ್ಲೆಯಾದ್ಯಂತ ೪೦ ಹೆಕ್ಟೇರುಗಳಿಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ೩೯೯ ಸಣ್ಣ ಕೆರೆಗಳು, ೨೫ ಅಣೆಕಟ್ಟು ಪಿಕಪ್‌ಗಳೂ, ೩೨ ಜಿನುಗು ಕೆರೆಗಳು ಹಾಗೂ ಆರು ಏತ ನೀರಾವರಿ ಯೋಜನೆಗಳು ಒಳಪಟ್ಟಿವೆ. ಈ ಯೋಜನೆಗಳ ದುರಸ್ತಿ, ನಿರ್ವಹಣೆ, ಹೊಸ ಕಾಮಗಾರಿಗಳ ಅನುಷ್ಠಾನ ಮುಂತಾದ ಕಾರ್ಯ ನಿರ್ವಹಿಸುತ್ತಿದೆ. ಈ ಒಟ್ಟು ೪೬೨ ಯೋಜನೆಗಳ ಒಟ್ಟು ಅಚ್ಚುಕಟ್ಟು ೩೯,೯೭೯ ಹೆಕ್ಟೇರ್‌ಗಳಾಗಿದೆ. ಈ ಪೈಕಿ ಬಹುತೇಕ ಕೆರೆಗಳು ಬಹಳ ಹಳೆಯ ಕೆರೆಗಳಾಗಿದ್ದು, ಶೇ.೧೫ ರಿಂದ ೩೦ ರಷ್ಟು ಹೂಳು ತುಂಬಿಕೊಂಡಿದೆ. ಸಣ್ಣ ನೀರಾವರಿ ಕೆರೆಗಳು ಮಳೆಯನ್ನು ಆಶ್ರಯಿಸಿದ್ದು, ೨೦೧೨-೧೩ರಲ್ಲಿ ಯಾವುದೇ ಕೆರೆಗಳಲ್ಲಿ ಪೂರ್ಣಮಟ್ಟಕ್ಕೆ ತುಂಬಿ ನೀರು ಸಂಗ್ರಹಣೆಯಾಗಿರುವುದಿಲ್ಲ. "ನೀರಾವರಿ ಸಲಹಾ ಸಮಿತಿ" ನಿರ್ಣಯದಂತೆ ಕೆರೆಗಳಿಂದ ನೀರಾವರಿಗಾಗಿ ನೀರನ್ನು ಒದಗಿಸಲಾಗುತ್ತಿದೆ. ಪ್ರತಿ ವರ್ಷ ಕೆರೆಗಳ ವಾರ್ಷಿಕ ನಿರ್ವಹಣೆ ಹಾಗೂ ದುರಸ್ತಿ ಕಾರ್ಯಗಳನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲಾಗುತ್ತಿದೆ.

ಸಣ್ಣ ನೀರಾವರಿ ಉಪವಿಭಾಗ, ತುಮಕೂರು ಈ ವಿಭಾಗದಲ್ಲಿ ತುಮಕೂರು, ಕೊರಟಗೆರೆ, ಮಧುಗಿರಿ, ಪಾವಗಡ ಹಾಗೂ ಕುಣಿಗಲ್ ತಾಲೂಕುಗಳು ಸೇರಿದ್ದರೆ, ಸಣ್ಣ ನೀರಾವರಿ ಉಪವಿಭಾಗ, ತಿಪಟೂರು ಈ ವಿಭಾಗದಲ್ಲಿ ಗುಬ್ಬಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಶಿರಾ ಹಾಗೂ ತುರುವೇಕೆರೆ ತಾಲೂಕುಗಳು ಸೇರಿ ಕಾರ್ಯಪಾಲಕ ಎಂಜಿನಿಯರ್‌ರವರ ಕಛೇರಿಯ ವ್ಯಾಪ್ತಿಗೆ ಒಳಪಡುತ್ತವೆ. ಅಧೀಕ್ಷಕ ಎಂಜಿನಿಯರ್, ಸಣ್ಣ ನೀರಾವರಿ ವೃತ್ತ, ಜಯನಗರ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು/ಮುಖ್ಯ ಎಂಜಿನಿಯರ್ ಸಣ್ಣ ನೀರಾವರಿ (ದ) ವಲಯ, ಕೆ.ಆರ್.ವೃತ್ತ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಹಿಳೆಯರ ಮತ್ತು ಮಕ್ಕಳ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಉದ್ದೇಶದೊಂದಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ೧೯೮೫ರಲ್ಲಿ ತುಮಕೂರಿನಲ್ಲಿ ಆರಂಭಗೊಂಡಿತು. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಒಬ್ಬರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿಗಳು, ಇಬ್ಬರು ಅಧೀಕ್ಷಕರು, ನಾಲ್ಕು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು, ಇಬ್ಬರು ಬೆರಳಚ್ಚುಗಾರರು, ಮತ್ತಿತರ ಸಿಬ್ಬಂದಿ ಇದ್ದಾರೆ. ಬಾಲನ್ಯಾಯ ಕಾಯ್ದೆ-೨೦೦೦, ವರದಕ್ಷಿಣೆ ನಿಷೇಧ ಕಾಯ್ದೆ ೨೦೦೪, ಬಾಲಕಾರ್ಮಿಕರ ನಿಷೇಧ ಮತ್ತು ನಿಯಂತ್ರಣ ಕಾಯ್ದೆ-೨೦೦೫, ಅನೈತಿಕ ವ್ಯವಹಾರ ಅಧಿನಿಯಮ-೧೯೫೬, ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ಕಾರ್ಯನಿರ್ವಹಣೆಯಲ್ಲಿ ಅನುಸರಿಸುತ್ತಿದೆ. ಗರ್ಭಿಣಿ ಬಾಣಂತಿಯರಲ್ಲಿ ಅಪೌಷ್ಠಿಕತೆ ನಿವಾರಿಸಿ, ಶಿಶುಮರಣ ಮತ್ತು ಗರ್ಭಿಣಿಯರ ಮರಣವನ್ನು ಕಡಿಮೆ ಮಾಡುವುದು, ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬಿಗಳಾಗಿಸುವುದನ್ನು ಮುಖ್ಯ ಗುರಿಯಾಗಿಸಿಕೊಂಡು 'ಸ್ತ್ರೀ ಶಕ್ತಿ' ಯೋಜನೆ; ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಮತ್ತು ಸಶಕ್ತೀಕರಣಕ್ಕಾಗಿ 'ಸ್ವಯಂ ಸಿದ್ಧಾ' ಯೋಜನೆ; ದೌರ್ಜನ್ಯ ಹಾಗೂ ಅತ್ಯಾಚಾರಕ್ಕೆ ಒಳಪಟ್ಟ ಮಹಿಳೆಯರಿಗೆ ಆರ್ಥಿಕ ಸಹಾಯ, ಕಾನೂನು ನೆರವು ನೀಡುವ ಸಲುವಾಗಿ' ಸಾಂತ್ವನ' ಆರ್ಥಿಕವಾಗಿ ಹಿಂದುಳಿದ ಮಹಿಳೆಯರ ಸ್ಥಾನಮಾನ

ಹೆಚ್ಚಿಸಿ ಅವರನ್ನು ಆರ್ಥಿಕವಾಗಿ ಸ್ವಾವಲಂಬಿಗಳನ್ನಾಗಿ ಮಾಡಲು ವೃತ್ತಿ ತರಬೇತಿ ಪಡೆಯುವ ಮಹಿಳೆಯರಿಗೆ ಆರ್ಥಿಕ ಸಹಾಯ, ಗ್ರಾಮಾಂತರ ಪ್ರದೇಶದ ಹೆಣ್ಣು ಮಕ್ಕಳ ವಿದ್ಯಾಭ್ಯಾಸವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಗ್ರಾಮಾಂತರ ಪ್ರದೇಶದ ಬಾಲಕಿಯರಿಗೆ ವಸತಿ ನಿಲಯ ನಡೆಸಲು ಆರ್ಥಿಕ ನೆರವು, ಕಾನೂನು ಪದವಿ ಪಡೆದಿರುವ ಮಹಿಳೆಯರಿಗೆ ಕಾನೂನು ಆಡಳಿತದಲ್ಲಿ ತರಬೇತಿ ಪಡೆಯಲು ಆರ್ಥಿಕ ಸಹಾಯ ನೀಡಲು 'ಮಹಿಳಾ ಕಾನೂನು ಪದವೀಧರರಿಗೆ ಧನಸಹಾಯ, ಶಿಶುಪಾಲನಾ ಕೇಂದ್ರಗಳು, ಬಾಲನ್ಯಾಯ ಕಾಯಿದೆಯ ಅನುಷ್ಠಾನ, ವೀಕ್ಷಣಾಲಯಗಳು, ಬಾಲಮಂದಿರಗಳು, ಮಕ್ಕಳ ಸಹಾಯವಾಣಿ ಮತ್ತಿತರ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು ಈ ಕಛೇರಿಯ ಪ್ರಮುಖ ಕಾರ್ಯಚಟುವಟಿಕೆಗಳಾಗಿವೆ.

ತಾಲೂಕು ಮಟ್ಟದಲ್ಲಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ತುಮಕೂರು ನಗರ, ತುಮಕೂರು ಗ್ರಾಮಾಂತರ, ತಿಪಟೂರು, ತುರುವೇಕೆರೆ, ಕುಣಿಗಲ್, ಮಧುಗಿರಿ, ಕೊರಟಗೆರೆ, ಶಿರಾ ಪಾವಗಡ, ಗುಬ್ಬಿ ಹಾಗೂ ಚಿಕ್ಕನಾಯಕನಹಳ್ಳಿ ತಾಲೂಕುಗಳಲ್ಲಿದ್ದು, ಆಯಾ ತಾಲೂಕಿನ ಅಧಿಕಾರ ಹೊಂದಿರುತ್ತಾರೆ. ಅಲ್ಲದೆ ವೀಕ್ಷಣಾಲಯ, ಬಾಲಕಿಯರ ಬಾಲಮಂದಿರಗಳಿವೆ. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಕೇಂದ್ರ ಗ್ರಂಥಾಲಯ

ಜನತೆಯ ಬೌದ್ಧಿಕ ಬೆಳವಣಿಗೆಗೆ ಮಾಹಿತಿ ಕೇಂದ್ರವಾದ ಗ್ರಂಥಾಲಯಗಳು, ಜನ ಸಾಮಾನ್ಯರಲ್ಲಿ ಸಾಹಿತ್ಯಾಭಿರುಚಿಯನ್ನು ಹೆಚ್ಚಿಸುವುದಲ್ಲದೆ, ಸಾಮಾಜಿಕ ವೈಜ್ಞಾನಿಕ ಹಾಗೂ ನಾಗರಿಕ ಪ್ರಜ್ಞೆಯನ್ನು ಅರಳಿಸುವ ಶ್ರೀ ಸಾಮಾನ್ಯರ ವಿಶ್ವ ವಿದ್ಯಾಲಯಗಳೆಂದೇ ಹೇಳಬಹುದು. ಈ ದಿಸೆಯಲ್ಲಿ ಸರ್ಕಾರ ಜಾರಿಗೊಳಿಸಿದ ಸಾರ್ವಜನಿಕ ಗ್ರಂಥಾಲಯ ಕಾಯಿದೆ ಉಪವಿಧಿಯನ್ವಯ ತುಮಕೂರು ನಗರದಲ್ಲಿ ೧೯೭೨ ರಂದು ಜಿಲ್ಲಾ ಕೇಂದ್ರ ಗ್ರಂಥಾಲಯ ಆರಂಭಗೊಂಡಿತು. ಈ ಕಛೇರಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಸೇರಿದೆ. ಮುಖ್ಯ ಗ್ರಂಥಾಲಯಾಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಇಬ್ಬರು ಗ್ರಂಥಪಾಲಕರು, ಹತ್ತು ಗ್ರಂಥಾಲಯ ಸಹಾಯಕರು, ಒಬ್ಬೊಬ್ಬ ಪ್ರಥಮ ಹಾಗೂ ದ್ವಿತೀಯ ದರ್ಜೆ ಸಹಾಯಕರು, ಒಬ್ಬ ಬೆರಳಚ್ಚುಗಾರರು, ಐವರು ಗ್ರಂಥಾಲಯ ಸಹವರ್ತಿಗಳು ಮತ್ತಿತರ ಸಿಬ್ಬಂದಿ ವರ್ಗವಿದೆ. ಸಾರ್ವಜನಿಕ ಗ್ರಂಥಾಲಯ ಕಾಯಿದೆ ೧೯೬೫, ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಈ ಜಿಲ್ಲೆಯ ಎಲ್ಲಾ ಹತ್ತು ತಾಲೂಕುಗಳಲ್ಲಿ ಶಾಖಾ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ ಜಿಲ್ಲೆಯಲ್ಲಿ ೩೨೮ ಗ್ರಾಮ ಪಂಚಾಯತಿ ಗ್ರಂಥಾಲಯಗಳು ಕಾರ್ಯನಿರ್ವಹಿಸುತ್ತಿವೆ. ಸದರಿ ಗ್ರಂಥಾಲಯಗಳು ಸಾರ್ವಜನಿಕರಿಗೆ ಗ್ರಂಥಾಲಯ ಸೇವೆಯನ್ನು ವಿಸ್ತರಿಸುವುದರ ಮೂಲಕ ಜ್ಞಾನಾರ್ಜನೆ ಹಾಗೂ ನಿರಂತರ ಕಲಿಕೆ ಸೌಲಭ್ಯಗಳನ್ನು ಒದಗಿಸುತ್ತಿವೆ. ಸಾರ್ವಜನಿಕರಿಗೆ ದಿನಪತ್ರಿಕೆ, ನಿಯತಕಾಲಿಕೆಗಳು ಹಾಗೂ ಇನ್ನಿತರ ಓದುವ ಸಾಮಗ್ರಿಗಳನ್ನು ಪಡೆದು ಓದುವ ಅವಕಾಶ ಕಲ್ಪಿಸಲಾಗುವುದು ಮತ್ತು ನಿಗದಿ ಪಡಿಸಿರುವ ಶುಲ್ಕವನ್ನು ನೀಡಿ ಪುಸ್ತಕಗಳನ್ನು ಎರವಲು ಪಡೆಯಬಹುದಾಗಿದೆ. ಪ್ರತಿ ವರ್ಷ ನವೆಂಬರ್ ೧೪ ರಿಂದ ೨೦ರವರೆಗೆ ರಾಷ್ಟ್ರೀಯ ಗ್ರಂಥಾಲಯ ಸಪ್ತಾಹದ ಅಂಗವಾಗಿ ಪುಸ್ತಕ ಪ್ರದರ್ಶನ ಏರ್ಪಡಿಸುತ್ತದೆ. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಬೆಂಗಳೂರು ರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ

ಜಿಲ್ಲೆಯಲ್ಲಿ ಪಶು ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಆಡಳಿತ ನಿರ್ವಹಣಾ ದೃಷ್ಟಿಯಿಂದ ತುಮಕೂರಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯ ಸೇವೆಗಳ ಇಲಾಖೆಯನ್ನು ಅಸ್ತಿತ್ವಕ್ಕೆ ತರಲಾಯಿತು. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುವರು. ಅವರ ನೆರವಿಗೆ ಒಬ್ಬರು ಆಡಳಿತ ಸಹಾಯಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಮೂವರು ದ್ವಿತೀಯ ದರ್ಜೆ ಸಹಾಯಕರು, ಮತ್ತಿತರ ಸಿಬ್ಬಂದಿ ವರ್ಗವಿತ್ತು, ಕರ್ನಾಟಕ

ನಾಗರಿಕ ಸೇವಾ ನಿಯಮಾವಳಿಗಳು, ಕರ್ನಾಟಕ ಆರ್ಥಿಕ ಸಂಹಿತೆ ಮತ್ತು ಇಲಾಖಾ ಕೈಪಿಡಿ ಹಾಗೂ ಸರ್ಕಾರದಿಂದ ಹಾಗೂ ಜಿಲ್ಲಾ ಪಂಚಾಯತ್‌ನಿಂದ ಆಗಿಂದಾಗ್ಗೆ ಬಿಡುಗಡೆಯಾಗುವ ನಿಯಮ ಅಧಿನಿಯಮಗಳಿದ್ದು, ಕಛೇರಿ ತನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಜಾನುವಾರುಗಳನ್ನು ರೋಗರುಜಿನಗಳಿಂದ ರಕ್ಷಣೆ, ಪಶುಸಂಪತ್ತು ಮತ್ತು ಪಶು ಸಂತತಿಯ ಅಭಿವೃದ್ಧಿ, ಇಲಾಖೆಗಳಿಗೆ ಸಂಬಂಧಿಸಿದ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳ ಅನುಷ್ಠಾನ, ಮೇವು ಅಭಿವೃದ್ಧಿ, ಪಶು ಆಹಾರ ಅಭಿವೃದ್ಧಿ, ಬರಡು ರಾಸುಗಳ ಚಿಕಿತ್ಸಾ ಶಿಬಿರ, ಸಂಚಾರ ಪಶು ಚಿಕಿತ್ಸಾ ಸೌಲಭ್ಯ, ವಿಶೇಷ ಘಟಕ ಯೋಜನೆ, ಗಿರಿಜನ ಉಪಯೋಜನೆ ಮೊದಲಾದವು ಈ ಇಲಾಖೆಯ ಪ್ರಮುಖ್ಯ ಧ್ಯೇಯೋದ್ದೇಶ ಹಾಗೂ ಕಾರ್ಯಚಟುವಟಿಕೆಗಳಾಗಿದ್ದವು.

ಜಿಲ್ಲೆಯಲ್ಲಿ ೧೮ ಪಶು ಆಸ್ಪತ್ರೆಗಳು, ೧೦೪ ಪಶು ಚಿಕಿತ್ಸಾಲಗಳು, ೮೫ ಪ್ರಾಥಮಿಕ ಪಶು ಚಿಕಿತ್ಸಾಲಯಗಳು, ೧೦ ಸಂಚಾರಿ ಪಶು ಚಿಕಿತ್ಸಾಲಯಗಳು ಹಾಗೂ ೧೬ ಕೃತಕ ಗರ್ಭಧಾರಣೆ ಉಪಕೇಂದ್ರಗಳು ಉಪನಿರ್ದೇಶಕರ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಇವುಗಳ ಜೊತೆಗೆ ಇತರೆ ಸಂಸ್ಥೆಗಳಾದ ಕೋಳಿ ವಿಸ್ತಾರಣಾ ಕೇಂದ್ರ, ಕುರಿ ಪೋಷಣಾ ಸಂಘ, ದೊಡ್ಡರೋಗ ತಡೆ, ದೊಡ್ಡ ರೋಗ ನಿವಾರಣಾ ಯೋಜನೆ, ವಿಶೇಷ ಜಾನುವಾರು ತಳಿ ಅಭಿವೃದ್ಧಿ ಯೋಜನೆ, ಪಶುವೈದ್ಯಕೀಯ ಪರೀಕ್ಷಕರ ತರಬೇತಿ ಕೇಂದ್ರ, ಕುರಿ ಅಭಿವೃದ್ದಿ ಮಂಡಳಿ, ಹಳ್ಳಿಕಾರ್ ತಳಿ ಸಂವರ್ಧನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

## ಮೀನುಗಾರಿಕೆ ಇಲಾಖೆ

ಜಿಲ್ಲೆಯಲ್ಲಿ ಲಭ್ಯವಿರುವ ಜಲಸಂಪನ್ಮೂಲಗಳನ್ನು ಉಪಯೋಗಿಸಿಕೊಂಡು ಮೀನು ಕೃಷಿಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಸೆಪ್ಟಂಬರ್ ೧೯೭೫ರಲ್ಲಿ ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರ ಕಛೇರಿಯು ತುಮಕೂರಿನಲ್ಲಿ ಆರಂಭಗೊಂಡಿತು. ಹಿರಿಯ ಸಹಾಯಕ ನಿರ್ದೇಶಕರು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಒಬ್ಬರು ಕಛೇರಿಯ ಅಧೀಕ್ಷಕರು, ಇಬ್ಬರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗ ದೈನಂದಿನ ಆಡಳಿತದಲ್ಲಿ ಇವರಿಗೆ ನೆರವಾಗುತ್ತಿದ್ದಾರೆ.

ಒಳನಾಡು ಜಲಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಮೀನುಗಾರಿಕೆ ಅಭಿವೃದ್ಧಿ ಪಡಿಸುವುದು, ತನ್ಮೂಲಕ ಹೆಚ್ಚು ಹೆಚ್ಚು ಮೀನು ಉತ್ಪಾದಿಸುವುದು; ಮೀನುಗಾರಿಕೆ ಅಭಿವೃದ್ಧಿಯಿಂದ ಉದ್ಯೋಗ ಸೃಷ್ಟಿ ಮಾಡಿ ಗ್ರಾಮೀಣ ಜನರ ಆರ್ಥಿಕಾಭಿವೃದ್ಧಿಗೆ ಸಹಾಯ ಮಾಡುವುದು, ಮೀನುಗಾರಿಕೆಯಲ್ಲಿ ತೊಡಗುವ ರೈತರಿಗೆ ತರಬೇತಿ, ತಾಂತ್ರಿಕ ಸಲಹೆ ನೀಡುವುದು; ಇಲಾಖಾವತಿಯಿಂದ ಮೀನುಮರಿ ಉತ್ಪಾದಿಸಿ, ಪಾಲನೆ ಮಾಡಿ, ಬಿತ್ತನೆ ಮರಿಗಳನ್ನು ಫಲಾನುಭವಿಗಳಿಗೆ, ಮೀನು ಪಾಶುವಾರು ಹಕ್ಕನ್ನು ಪಡೆದವರಿಗೆ ವಿತರಿಸುವುದು; ಜಿಲ್ಲಾ ಹಾಗೂ ರಾಜ್ಯ ವಲಯಗಳ, ತಾಲೂಕು ಪಂಚಾಯಿತಿ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಮುಂತಾದ ಮುಖ್ಯ ಧ್ಯೇಯೋದ್ದೇಶಗಳನ್ನು ಹೊಂದಿ ಇಲಾಖೆಯು ಕಾರ್ಯ ಚಟುವಟಿಕೆಯಲ್ಲಿ ತೊಡಗಿದೆ.

**ಮೀನಿನ ಬೆಳೆ ಹಣದ ಹೊಳೆ**
**ಮೀನು ಸೇವಿಸಿ ವೈದ್ಯರಿಂದ ದೂರವಿರಿ,**
**ಮನೆಗೆರಡು ಮಕ್ಕಳು ಚಂದ**
**ಬಾವಿಗೆ ಎರಡು ನೂರ ಐವತ್ತು ಮೀನು ಮರಿ ಅಂದ**

ಎಂಬ ಉದ್ಗಾರದೊಂದಿಗೆ ಜಿಲ್ಲೆಯಲ್ಲಿ ಕೃಷಿಗೆ ಯೋಗ್ಯವಲ್ಲದ ಭೂಮಿಯಲ್ಲಿ ಮೀನು ಸಾಕಾಣಿಕೆ ಕೊಳಗಳನ್ನು ನಿರ್ಮಿಸಿ ಮೀನು ಪಾಲನೆ ಕೈಗೊಳ್ಳುವುದರಿಂದ ಹೆಚ್ಚಿನ ಆದಾಯಗಳಿಸಬಹುದಾಗಿದೆ.

ತುಮಕೂರು, ಕುಣಿಗಲ್, ಗುಬ್ಬಿ, ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ, ಶಿರಾ, ಕೊರಟಗೆರೆ ಹಾಗೂ ಪಾವಗಡ ತಾಲೂಕುಗಳಲ್ಲಿ ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-೨) ರವರುಗಳು ಕಾರ್ಯನಿರ್ವಹಿಸುತ್ತಿದ್ದು, ಆಯಾ ತಾಲೂಕು ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಮಧುಗಿರಿ ತಾಲೂಕಿನಲ್ಲಿ ಮೀನುಗಾರಿಕೆ ಮೇಲ್ವಿಚಾರಕರು ಕಾರ್ಯನಿರ್ವಹಿಸುತ್ತಿದ್ದಾರೆ. ಮಧುಗಿರಿ ಮೀನುಗಾರಿಕೆ ಮೇಲ್ವಿಚಾರಕರು ಮೀನುಗಾರಿಕೆ ಸಹಾಯಕ ನಿರ್ದೇಶಕರು (ಶ್ರೇಣಿ-೨) ಕೊರಟಗೆರೆ ಇವರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಮೀನುಗಾರಿಕೆ ಉಪನಿರ್ದೇಶಕರು ಬೆಂಗಳೂರು ವಲಯ, ಬೆಂಗಳೂರು ರವರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ತುಮಕೂರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ

ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯು ತುಮಕೂರಿನಲ್ಲಿ ಒಂದನೇ ಜನವರಿ ೧೯೫೮ ರಿಂದ ಕಾರ್ಯಾರಂಭ ಮಾಡುತ್ತಿದೆ. ೧೯೫೮ ಕ್ಕೂ ಪೂರ್ವದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಬೆಂಗಳೂರು ವಿಭಾಗ ಬೆಂಗಳೂರು ರವರ ಆಡಳಿತ ವ್ಯಾಪ್ತಿಗೊಳಪಟ್ಟಿತ್ತು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಈ ಕಛೇರಿಯ ಮುಖ್ಯಾಧಿಕಾರಿಯಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಒಬ್ಬ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿ, ಒಬ್ಬರು ಕೇಂದ್ರ ಸ್ಥಾನ ಅಧಿಕಾರಿ, ಮೂವರು ಹಿರಿಯ ಮೋಟಾರು ವಾಹನ ನಿರೀಕ್ಷಕರು, ಆರುಮಂದಿ ಮೋಟಾರು ನಿರೀಕ್ಷಕರು, ಮೂವರು ಅಧೀಕ್ಷಕರುಗಳು, ನಾಲ್ಕು ಪ್ರಥಮ ದರ್ಜೆ ಸಹಾಯಕರು, ಎಂಟು ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ.

ಮೋಟಾರು ವಾಹನಗಳ ನೋಂದಣಿ, ರಾಜ್ಯ ಸರ್ಕಾರಕ್ಕೆ ಮೋಟಾರು ವಾಹನಗಳ ತೆರಿಗೆ ಸಂಗ್ರಹಣೆ, ವಾಹನ ಚಾಲಕ ಮತ್ತು ನಿರ್ವಾಹಕರ ಲೈಸೆನ್ಸ್ ನೀಡಿಕೆ, ಸಾರಿಗೆ ವಾಹನಗಳಿಗೆ ರಹದಾರಿ ಮಂಜೂರಾತಿ ಮೊದಲಾದ ಧ್ಯೇಯೋದ್ದೇಶಗಳೊಂದಿಗೆ ಕಾರ್ಯಚಟುವಟಿಕೆಯಲ್ಲಿ ಈ ಇಲಾಖೆಯು ತೊಡಗಿದೆ.

ಕೇಂದ್ರ ಮೋಟಾರು ವಾಹನಕಾಯ್ದೆ-೧೯೮೮, ಕರ್ನಾಟಕ ಮೋಟಾರು ವಾಹನ ಕಾಯ್ದೆ-೧೯೫೭, ಮೋಟಾರು ವಾಹನಗಳು ಕಾಯ್ದೆ ೧೯೮೮, ಕೇಂದ್ರ ಮೋಟಾರು ವಾಹನ ನಿಯಮಾವಳಿಗಳು-೧೯೮೯, ಕರ್ನಾಟಕ ಮೋಟಾರು ವಾಹನ ನಿಯಮಾವಳಿಗಳು-೧೯೮೯ ಮೊದಲಾದ ನಿಯಮಗಳನ್ನು ಅನುಸರಿಸಿ ಈ ಕಛೇರಿಯು ತನ್ನ ಕಾರ್ಯನಿರ್ವಹಣೆಯಲ್ಲಿ ತೊಡಗಿದೆ. ಉಪ ಸಾರಿಗೆ ಆಯುಕ್ತರು ಬೆಂಗಳೂರು (ಗ್ರಾಮಾಂತರ) ವಿಭಾಗ, ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಗಣಿ ಮತ್ತು ಭೂ-ವಿಜ್ಞಾನ ಇಲಾಖೆ

ಹಿರಿಯ ಭೂ-ವಿಜ್ಞಾನಿಯವರ ಕಛೇರಿ ತುಮಕೂರಿನಲ್ಲಿ ಮೇ ೧೯೯೦ ರಿಂದ ಕಾರ್ಯಾರಂಭಗೊಂಡಿದ್ದು, ಇದು ಜೂನ್ ೨೦೦೧ ರಿಂದ ಉಪನಿರ್ದೇಶಕರ ಕಛೇರಿ ಎಂದು ಬದಲಾಗಿರುತ್ತದೆ. ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿಯ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಇಬ್ಬರು ಭೂ-ವಿಜ್ಞಾನಿಗಳು, ಒಬ್ಬ ಸಹಾಯಕ ಅಭಿಯಂತರರು, ಇಬ್ಬರು ಕಿರಿಯ ಅಭಿಯಂತರರು ಹಾಗೂ ಸಿಬ್ಬಂದಿ ಶಾಖೆಯು ಸೇರಿದಂತೆ ೧೯ ಮಂದಿ ಸಿಬ್ಬಂದಿ ವರ್ಗವಿದ್ದು, ಪ್ರಸ್ತುತ ೧೩ ಮಂದಿ ಕೆಲಸ ನಿರ್ವಹಿಸುತ್ತಿದ್ದು, ಆರು ಹುದ್ದೆಗಳು ಖಾಲಿ ಇರುತ್ತದೆ.

ಈ ಇಲಾಖೆಯು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಾವಳಿ ೧೯೯೪ ಮತ್ತು ಮೈನ್ಸ್ ಅಂಡ್ ಮಿನರಲ್ಸ್ (ನಿಯಮಿತ ಮತ್ತು ಅಭಿವೃದ್ಧಿ) ಅಧಿನಿಯಮ ೧೯೫೭ ಮೊದಲಾದ ಕಾಯ್ದೆ ನಿಯಮಗಳನ್ನು ತನ್ನ ದಿನನಿತ್ಯದ ಚಟುವಟಿಕೆಗಳಲ್ಲಿ ಅನುಸರಿಸುತ್ತಿದೆ. ಜಿಲ್ಲೆಯಲ್ಲಿ ಕಲ್ಲುಗಣಿ ಗುತ್ತಿಗೆ ಕರಾರು ಮಂಜೂರು ಮಾಡುವುದು, ರಾಜಸ್ವ (ರಾಜಧನ) ವಸೂಲಾತಿ, ಅನಧಿಕೃತ ಗಣಿಗಾರಿಕೆ/ಸಾಗಾಣಿಕೆಯನ್ನು ತಡೆಯುವುದು ಮತ್ತು ದಂಡ ವಿಧಿಸುವುದಲ್ಲದೇ ಅಕ್ರಮ ಗಣಿಗಾರಿಕೆ/ಸಾಗಾಣಿಕೆಯಲ್ಲಿ ತೊಡಗಿರುವವರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆ ಮತ್ತು ನ್ಯಾಯಾಲಯಗಳಲ್ಲಿ

ಮೊಕದ್ದಮೆ ದಾಖಲಿಸುವುದು. ಇದರೊಂದಿಗೆ ಉಪನಿರ್ದೇಶಕರು ಜಿಲ್ಲಾ ಮಟ್ಟದ ಟಾಸ್ಕ್‌ಪೋರ್ಸ್, ಮರಳು ಉಸ್ತುವಾರಿ ಮತ್ತು ಜಿಲ್ಲಾ ಜಲ್ಲಿಪುಡಿ ಮಾಡುವ ಘಟಕಗಳ ನಿಯಂತ್ರಣ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿದ್ದು, ಸಭೆಗಳನ್ನು ಆಯೋಜಿಸಿ, ಜಿಲ್ಲಾಧಿಕಾರಿಯವರಿಗೆ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ಒದಗಿಸಿ ಇಲಾಖೆಯ ಕರ್ತವ್ಯಗಳನ್ನು ನಿರ್ವಹಿಸುತ್ತಿರುತ್ತಾರೆ. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ

ವಸತಿ ಇಲಾಖೆಗೆ ಸೇರಿದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಯು ಜನವರಿ ೧೯೮೫ರಲ್ಲಿ ತುಮಕೂರಿನಲ್ಲಿ ಆರಂಭಗೊಂಡಿತು. ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಈ ಕಛೇರಿಯ ಮುಖ್ಯಸ್ಥರಾಗಿದ್ದು, ತುಮಕೂರು, ಚಿತ್ರದುರ್ಗ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಆಡಳಿತ ವ್ಯಾಪ್ತಿ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಇಬ್ಬರು ಸಹಾಯಕ ಎಂಜಿನಿಯರ್, ಒಬ್ಬರು ಕಿರಿಯ ಎಂಜಿನಿಯರ್, ಒಬ್ಬರು ಅಧೀಕ್ಷಕರು, ಮೂವರು ಪ್ರಥಮ ದರ್ಜೆ ಸಹಾಯಕರು, ಮೂವರು ದ್ವಿತೀಯ ದರ್ಜೆ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿತ್ತು. ಆಡಳಿತದಲ್ಲಿ ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮತ್ತು ಕರ್ನಾಟಕ ಕೊಳಚೆ ಪ್ರದೇಶಗಳ ಅಭಿವೃದ್ಧಿ ಮತ್ತು ನಿರ್ಮೂಲನ ಕಾಯ್ದೆ ೧೯೭೩ ಮೊದಲಾದ ನಿಯಮ ಹಾಗೂ ಅಧಿನಿಯಮಗಳನ್ನು ಅನುಸರಿಸುತ್ತಿದೆ.

ನಗರ ಸಭೆ, ಪುರಸಭೆ ವ್ಯಾಪ್ತಿಯಲ್ಲಿ ಬರುವ ಘೋಷಿತ ಕೊಳಚೆ ಪ್ರದೇಶಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು, ಒಳ ಚರಂಡಿ, ರಸ್ತೆ, ಬೀದಿ ದೀಪ, ಕುಡಿಯುವ ನೀರಿನ ವ್ಯವಸ್ಥೆ, ಅಡ್ಡಮೋರಿಗಳ ನಿರ್ಮಾಣ, ಡಾಂಬರೀಕರಣ, ಸಾಮೂಹಿಕ ಶೌಚಾಲಯಗಳ ನಿರ್ಮಾಣ, ಸಮುದಾಯ ಭವನ ಹಾಗೂ ವಸತಿ, ಗೃಹ ನಿರ್ಮಾಣ, ಮೊದಲಾದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿದೆ. ನಿರ್ಮಲ ಜ್ಯೋತಿ ಯೋಜನೆ, ಸಮಗ್ರ ವಸತಿ ಮತ್ತು ಕೊಳಚೆ ಅಭಿವೃದ್ದಿ ಯೋಜನೆ ಹಾಗೂ ಕೊಳಚೆ ಪ್ರದೇಶಗಳ ಉನ್ನತೀಕರಣ, ಅಭಿವೃದ್ಧಿ ಯೋಜನೆ, ಸಮುದಾಯ ಶೌಚಾಲಯ, ರಾಜೀವ್‌ಗಾಂಧಿ ವಸತಿ ಯೋಜನೆ, ಪೈಲೆಟ್ ಯೋಜನೆ ಮತ್ತಿತರ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಕಾರ್ಯಪಾಲಕ ಅಭಿಯಂತಕರು ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ದಾವಣಗೆರೆ ವಿಭಾಗ, ದಾವಣಗೆರೆ ಮತ್ತು ಕಾರ್ಯಪಾಲಕ ಅಭಿಯಂತಕರು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ೩ನೇ ವಿಭಾಗ ಬೆಂಗಳೂರು ಇವರು ಈ ಉಪವಿಭಾಗ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿದ್ದಾರೆ.

## ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಅಂದಿನ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ ಅಧೀನದಲ್ಲಿ ವಿಶಾಲವಾದ ತುಮಕೂರು ಮತ್ತು ಕೋಲಾರ ಜಿಲ್ಲೆಗಳನ್ನು ಒಳಗೊಂಡ ತುಮಕೂರು ವೃತ್ತವು ಒಂದನೇ ನವೆಂಬರ್ ೧೯೬೫ ರಲ್ಲಿ ಕಾರ್ಯಾರಂಭಗೊಂಡಿತು. ನಂತರ ಒಂದನೇ ಆಗಸ್ಟ್ ೧೯೯೯ ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವೆಂದು ನಿಗಮೀಕರಣಗೊಂಡಿತ್ತು. ತದನಂತರ ಒಂದನೇ ಜೂನ್ ೨೦೦೦ ದಲ್ಲಿ ಕೋಲಾರ ಜಿಲ್ಲೆಯನ್ನು ಪ್ರತ್ಯೇಕಿಸಿ ಕೋಲಾರ ವೃತ್ತವನ್ನು ರಚಿಸಲಾಯಿತು. ಅಂದಿನಿಂದ ತುಮಕೂರು ವೃತ್ತವು ತುಮಕೂರು ಜಿಲ್ಲೆಗೆ ಮಾತ್ರ (೧೦ ತಾಲೂಕುಗಳು) ಸೀಮಿತಗೊಂಡಿದೆ. ನಂತರ ಒಂದನೇ ಜೂನ್ ೨೦೦೨ ರಂದು ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಅಸ್ತಿತ್ವಕ್ಕೆ ಬಂದಿತು. ವಿದ್ಯುತ್ ವಿತರಣಾ ಕ್ಷೇತ್ರದಲ್ಲಿ ಗ್ರಾಹಕರನ್ನು ತೃಪ್ತಿ ಪಡಿಸುವಲ್ಲಿ ದಕ್ಷಿಣ ಏಷ್ಯಾದಲೇ ಮೊದಲ ಸ್ಥಾನವನ್ನು ಹೊಂದಬೇಕೆನ್ನುವುದು ಬೆಂಗಳೂರು ವಿದ್ಯುತ್ ಕಂಪನಿಯ ಆಕಾಂಕ್ಷೆಯಾಗಿದೆ.

ಗ್ರಾಹಕರನ್ನು ಗರಿಷ್ಠ ಮಟ್ಟದಲ್ಲಿ ತೃಪ್ತರನ್ನಾಗಿಸಿ, ಸಂಸ್ಥೆಯ ವ್ಯವಹರಣೆಯಲ್ಲಿ ನಿರಂತರ ಲಾಭದಾಯಕ ಫಲಿತಾಂಶ ಹೊಂದುವುದನ್ನು ಖಚಿತಪಡಿಸಿಕೊಳ್ಳುವುದು ಬೆಂಗಳೂರು ವಿದ್ಯುತ್ ಕಂಪನಿಯ ಮೂಲ ಧ್ಯೇಯೋದ್ದೇಶವಾಗಿದೆ. ಅಧೀಕ್ಷಕ ಎಂಜಿನಿಯರ್ (ವಿದ್ಯುತ್) ಕಾರ್ಯ ಮತ್ತು ಪಾಲನಾ ವಿಭಾಗ ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿದ್ದಾರೆ. ಇವರಿಗೆ ನೆರವಾಗಲು ಕಾರ್ಯನಿರ್ವಾಹಕ ಅಭಿಯಂತರರು, ಸಹಾಯಕ

ಕಾರ್ಯಪಾಲಕ ಅಭಿಯಂತರರು, ಉಪಲೆಕ್ಕ ನಿಯಂತ್ರಣಾಧಿಕಾರಿ, ಅಕೌಂಟ್ಸ್ ಆಫೀಸರ್, ಸಹಾಯಕ ಎಂಜಿನಿಯರ್(ವಿ), ಕಿರಿಯ ಎಂಜಿನಿಯರ್(ವಿ), ಹಿರಿಯ ಸಹಾಯಕ, ಕಿರಿಯ ಸಹಾಯಕ, ಮೊದಲಾದ ಅಧಿಕಾರಿ ಸಿಬ್ಬಂದಿ ವರ್ಗವಿತ್ತು. ಅಧೀಕ್ಷಕ ಎಂಜಿನಿಯರ್(ವಿದ್ಯುತ್) ಅವರ ಅಧೀನದಲ್ಲಿ ತುಮಕೂರು ವಿಭಾಗ, ತಿಪಟೂರು ವಿಭಾಗ ಹಾಗೂ ಮಧುಗಿರಿ ವಿಭಾಗಗಳಿದ್ದು, ತುಮಕೂರು ವಿಭಾಗದಲ್ಲಿ ನಗರ ಉಪವಿಭಾಗ–೧, ನಗರ ಉಪವಿಭಾಗ–೨, ಕ್ಯಾತ್ಸಂದ್ರ ಉಪವಿಭಾಗ, ಗ್ರಾಮೀಣ ಉಪವಿಭಾಗ–೧, ಗ್ರಾಮೀಣ ಉಪವಿಭಾಗ–೨, ಗುಬ್ಬಿ ಉಪವಿಭಾಗ, ನಿಟ್ಟೂರು ಉಪವಿಭಾಗ, ಕುಣಿಗಲ್ ಉಪವಿಭಾಗ ಹಾಗೂ ಹುಲಿಯೂರು ದುರ್ಗ ಉಪವಿಭಾಗಗಳಿವೆ. ಹಾಗೇ ತಿಪಟೂರು ವಿಭಾಗದಲ್ಲಿ ತಿಪಟೂರು ಉಪವಿಭಾಗ, ತುರುವೇಕೆರೆ ಉಪವಿಭಾಗ ಮತ್ತು ಚಿಕ್ಕನಾಯಕನಹಳ್ಳಿ ಉಪವಿಭಾಗ ಹಾಗೂ ಮಧುಗಿರಿ ವಿಭಾಗದಲ್ಲಿ ಮಧುಗಿರಿ ಉಪವಿಭಾಗ, ಕೊಡಿಗೇನಹಳ್ಳಿ ಉಪವಿಭಾಗ, ಶಿರಾ ನಗರ ಉಪವಿಭಾಗ, ಶಿರಾ ಗ್ರಾಮೀಣ ಉಪವಿಭಾಗ, ಕೊರಟಗೆರೆ ಉಪವಿಭಾಗ ಹಾಗೂ ಪಾವಗಡ ಉಪವಿಭಾಗಗಳಿವೆ, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್‌ಗಳು ಆಯಾ ಉಪ ವಿಭಾಗಗಳ ಮುಖ್ಯಸ್ಥರಾಗಿದ್ದು, ಉಪವಿಭಾಗದ ಅಧಿಕಾರ ವ್ಯಾಪ್ತಿವುಳ್ಳವರಾಗಿರುತ್ತಾರೆ. ಮುಖ್ಯ ಎಂಜಿನಿಯರ್(ವಿ) ಬೆಂಗಳೂರು ವಿದ್ಯುತ್ ಕಂಪನಿ, ಚಿತ್ರದುರ್ಗ ರವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತ

ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪ್ರತಿಷ್ಠಿತ ಯೋಜನೆಯಾದ ಸಾರ್ವಜನಿಕ ವಿತರಣಾ ಪದ್ಧತಿಯ ಯಶಸ್ವೀ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದ ಪ್ರತಿನಿಧಿಯಾಗಿ, ಸದರಿ ಯೋಜನೆಯಡಿ ಹಾಗೂ ಕಾಲಕಾಲಕ್ಕೆ ಜಾರಿಗೆ ತರಲಾಗುವ ಇತರೆ ಯೋಜನೆಗಳಾದ ಕೂಲಿಗಾಗಿ ಕಾಳು, ಅಕ್ಷರ ದಾಸೋಹ ಯೋಜನೆ ಹಾಗೂ ಇನ್ನಿತರ ಯೋಜನೆಗಳಡಿ ಹಂಚಿಕೆಯಾದ ಆಹಾರ ಧಾನ್ಯಗಳು, ಸೀಮೆಎಣ್ಣೆ ಹಾಗೂ ಇತರೆ ನಾಗರಿಕ ಸೇವಾ ಸರಕುಗಳ ಖರೀದಿ ಎತ್ತುವಳಿ ಮತ್ತು ಸಗಟು ಚಿಲ್ಲರೆ ವಿತರಣಾ ಕಾರ್ಯದ ಉಸ್ತುವಾರಿ ಮಾಡುವುದು ಹಾಗೂ ಸರ್ಕಾರದ ಪ್ರತಿನಿಧಿಯಾಗಿ ರೈತರಿಂದ ಒರಟು ಧಾನ್ಯ ಮತ್ತು ಬತ್ತ ಖರೀದಿ ಸಂಗ್ರಹ ಹಾಗೂ ವಿತರಣಾ ಕಾರ್ಯನಿರ್ವಹಣೆ ಮೊದಲಾದ ಧ್ಯೇಯೋದ್ದೇಶಗಳೊಂದಿಗೆ ಈ ನಿಗಮವು ಏಳನೇ ಸೆಪ್ಟೆಂಬರ್ ೧೯೭೩ರಲ್ಲಿ ಆರಂಭಗೊಂಡಿತು. ಜಿಲ್ಲಾ ವ್ಯವಸ್ಥಾಪಕರು, ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮ ನಿಯಮಿತದ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ಸಹಾಯಕ ವ್ಯವಸ್ಥಾಪಕರು, ಕಛೇರಿ ವ್ಯವಸ್ಥಾಪಕರು, ಹಿರಿಯ ಸಹಾಯಕರು, ಕಿರಿಯ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ನಿಗಮದಲ್ಲಿ ರೂಪಿಸಲಾದ ನಿಯಮಗಳನ್ನು ಕಛೇರಿಯ ಕೆಲಸ ಕಾರ್ಯಗಳಲ್ಲಿ ಅನುಸರಿಸಲಾಗುತ್ತದೆ.

ಸಗಟು ಮಳಿಗೆಗಳು ತುಮಕೂರು ಗ್ರಾಮಾಂತರ, ಕುಣಿಗಲ್, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಕೊರಟಗೆರೆ, ಮಧುಗಿರಿ, ಪಾವಗಡ ಹಾಗೂ ಶಿರಾ ತಾಲೂಕುಗಳಲ್ಲಿದ್ದು, ಸಗಟು ಮಳಿಗೆ ನಿರ್ವಾಹಕರು ಆಯಾ ತಾಲೂಕು ಸಗಟು ಮಳಿಗೆಗಳ ಜವಾಬ್ದಾರಿ ಹೊಂದಿರುತ್ತಾರೆ. ಗುಬ್ಬಿ ಮತ್ತು ತಿಪಟೂರು ತಾಲೂಕುಗಳಲ್ಲಿ ಅಕ್ಷರ ದಾಸೋಹ ಮಳಿಗೆಗಳಿದ್ದು, ಮಳಿಗೆ ನಿರ್ವಾಹಕರು ಕಾರ್ಯನಿರ್ವಹಿಸುತ್ತಿದ್ದಾರೆ. ತುಮಕೂರು ಗ್ರಾಮಾಂತರ, ಕೊರಟಗೆರೆ ಮತ್ತು ಮಧುಗಿರಿ ತಾಲೂಕು ಕೇಂದ್ರಗಳಲ್ಲಿ ಸೀಮೆಎಣ್ಣೆ ಸಗಟು ವಿತರಣೆ ಮಾಡುತ್ತಿದ್ದು ಮಳಿಗೆ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ, ಗೂಳೂರು, ನಾಗವಲ್ಲಿ ಮತ್ತು ಹೆಬ್ಬೂರು ಗ್ರಾಮಗಳಲ್ಲಿ ಚಿಲ್ಲರೆ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ಕುಣಿಗಲ್, ತುರುವೇಕೆರೆ, ಚಿಕ್ಕನಾಯಕನಹಳ್ಳಿ, ಗುಬ್ಬಿ ಹಾಗೂ ತಿಪಟೂರು ತಾಲೂಕುಗಳಲ್ಲಿ ಬೆಂಬಲ ಬೆಲೆ ಯೋಜನೆಯಡಿ ರಾಗಿ ಖರೀದಿ ಕೇಂದ್ರಗಳಿದ್ದು, ಖರೀದಿ ಅಧಿಕಾರಿಗಳು ಆಯಾ ಕೇಂದ್ರಗಳ ಮುಖ್ಯಸ್ಥರಾಗಿರುತ್ತಾರೆ.

## ಸಮಾಜ ಕಲ್ಯಾಣ ಇಲಾಖೆ

ಪರಿಶಿಷ್ಟ ಜಾತಿ/ಪಂಗಡದವರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಹಾಗೂ ಅವರ ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳಿಗೆ ಪರಿಹಾರ ನೀಡುವ ಉದ್ದೇಶದಿಂದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಕಛೇರಿಯು ತುಮಕೂರಿನಲ್ಲಿ ಐದನೇ ಮೇ ೧೯೬೫ರಿಂದ ಕಾರ್ಯನಿರ್ವಹಿಸುತ್ತಿದೆ. ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು

ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಒಬ್ಬ ಕಛೇರಿ ಅಧೀಕ್ಷಕರು, ಒಬ್ಬ ವಿಶೇಷ ಘಟಕ ಅಧೀಕ್ಷಕರು, ಮೂವರು ಪ್ರಥಮ ದರ್ಜೆ ಸಹಾಯಕರು, ಇಬ್ಬರು ದ್ವಿತೀಯ ದರ್ಜೆ ಸಹಾಯಕರು ಮೊದಲಾದ ಸಿಬ್ಬಂದಿ ವರ್ಗವಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಪಂಗಡಗಳ ದೌರ್ಜನ್ಯ ತಡೆ ಕಾಯಿದೆ-೧೯೮೯, ಸೋಷಿಯಲ್ ವೆಲ್‌ಫೇರ್ ಮ್ಯಾನ್ಯುಯಲ್ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿ ತನ್ನ ದಿನನಿತ್ಯದ ಕಾರ್ಯನಿರ್ವಹಣೆಯಲ್ಲಿ ಪಾಲಿಸುತ್ತದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ, ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ನಗದು ಬಹುಮಾನ ಯೋಜನೆ ಹಾಗೂ ಹಾಸ್ಟೆಲ್ ಸೌಲಭ್ಯ ಒದಗಿಸುವುದು, ಪರಿಶಿಷ್ಟ ಜಾತಿಯವರಿಗೆ ನೀರಾವರಿ ಪಂಪ್‌ಸೆಟ್ ನೀಡುವುದೇ ಮುಂತಾದ ಕಲ್ಯಾಣ ಕಾರ್ಯಕ್ರಮಗಳನ್ನು ಈ ಕಛೇರಿಯು ಕಾರ್ಯಗತಗೊಳಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ತಾಲೂಕು ಮಟ್ಟದಲ್ಲಿ ಜಿಲ್ಲೆಯ ಎಲ್ಲಾ ೧೦ ತಾಲೂಕುಗಳಲ್ಲಿ ತಾಲೂಕು ಸಮಾಜ ಕಲ್ಯಾಣ ಅಧಿಕಾರಿಗಳಿದ್ದು, ಆಯಾ ತಾಲೂಕು ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಆಯುಕ್ತರು ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಇವರು ತತ್‌ಕ್ಷಣದ ಮೇಲಧಿಕಾರಿಯಾಗಿರುತ್ತಾರೆ.

**ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ**

ಸಹಕಾರಿ ಇಲಾಖೆಗೆ ಸೇರಿದ ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ (ನಿ)ವು ೧೯೭೫ರಿಂದ ಮಲ್ಲಸಂದ್ರ (ತುಮಕೂರು)ದಲ್ಲಿ ಕಾರ್ಯನಿರ್ವಹಿಸುತ್ತಿದೆ. ವ್ಯವಸ್ಥಾಪಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ನೆರವಾಗಲು ನಾಲ್ಕು ಮಂದಿ ವ್ಯವಸ್ಥಾಪಕರು, ೧೪ ಉಪ-ವ್ಯವಸ್ಥಾಪಕರು, ೨೩ ಸಹಾಯಕ ವ್ಯವಸ್ಥಾಪಕರು, ೩೯ ಅಧಿಕಾರಿಗಳು ಮತ್ತು ಮೇಲ್ವಿಚಾರಕರು, ಸೂಪರ್‌ವೈಸರ್ ಗ್ರೇಡ್-೧, ಸೂಪರ್‌ವೈಸರ್ ಗ್ರೇಡ್-೨, ಟೆಕ್ನೀಷಿಯನ್ಸ್ ಸೇರಿದಂತೆ ಒಟ್ಟು ೩೧೮ ನೌಕರರ ವರ್ಗವಿದೆ. ಸಹಕಾರಿ ಸಂಘಗಳ ಕಾಯ್ದೆ ಹಾಗೂ ನಿಯಮಗಳು, ಕಾರ್ಖಾನೆಗಳ ಕಾಯ್ದೆ, ಸಿಬ್ಬಂದಿ ಭವಿಷ್ಯ ನಿಧಿ, ಇ.ಎಸ್.ಐ. ಕಾಯ್ದೆ, ಬೋನಸ್ ಆ್ಯಕ್ಟ್, ಗ್ರಾಚ್ಯುಟಿ ಆ್ಯಕ್ಟ್, ಕನಿಷ್ಠ ಕೂಲಿ ಕಾಯಿದೆ ಮೊದಲಾದ ನಿಯಮ, ಅಧಿನಿಯಮಗಳನ್ನು ತನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಅನುಸರಿಸಲಾಗುತ್ತಿದೆ.

ಹಾಲು ಉತ್ಪಾದಕರಿಗೆ ವರ್ಷಪೂರ್ತಿ ನಿಖರವಾದ ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು, ನಗರ ಮತ್ತು ಪಟ್ಟಣ ಪ್ರದೇಶದ ಬಳಕೆದಾರರಿಗೆ ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವುದು, ಹಾಲು ಉತ್ಪಾದನೆ ಮತ್ತು ಹಾಲು ಸಂಸ್ಕರಣೆಗೆ ವ್ಯವಸ್ಥೆ ಕಲ್ಪಿಸುವುದು, ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯದ ಜೊತೆಗೆ ಹೈನುಗಾರಿಕೆಯನ್ನು ಒಂದು ಮುಖ್ಯ ಉಪ ಕಸುಬಾಗಿ ಕೈಗೊಳ್ಳಲು ಪ್ರೇರೇಪಿಸುವುದು ಹಾಗೂ ಆರ್ಥಿಕ ಸ್ವಾವಲಂಬಿಗಳಾಗಲು ಸಹಾಯ ಮಾಡುವುದು, ಸಂಘದ ಸದಸ್ಯರುಗಳಿಗೆ ಸಹಕಾರ ಶಿಕ್ಷಣ ಮತ್ತು ಮುಂದಾಳತ್ವ ತರಬೇತಿ ನೀಡುವುದು, ಹೈನುಗಾರಿಕೆಗೆ ಪೂರಕ ಆಧುನಿಕ ತಂತ್ರಜ್ಞಾನ ಮತ್ತು ತಾಂತ್ರಿಕ ಸೌಲಭ್ಯಗಳನ್ನು ಒದಗಿಸುವುದು, ಹಾಗೂ ಗ್ರಾಹಕರಿಗೆ ನಿರಂತರವಾಗಿ ಉತ್ತಮ ಗುಣಮಟ್ಟದ ಹಾಲು ಮತ್ತು ಹಾಲಿನ ಉತ್ಪನ್ನಗಳಾದ ಮೊಸರು, ತುಪ್ಪ, ಪೇಡ, ಮಸಾಲೆ ಮಜ್ಜಿಗೆ, ಗಿಣ್ಣು, ಐಸ್‌ಕ್ರೀಂ, ಮೈಸೂರು ಪಾಕ್ ಮೊದಲಾದವುಗಳನ್ನು ಒದಗಿಸುವುದು, ಈ ಒಕ್ಕೂಟದ ಮುಖ್ಯ ಧ್ಯೇಯೋದ್ದೇಶಗಳಾಗಿವೆ, ಅಲ್ಲದೇ ಹಾಲಿನ ಶೇಖರಣೆ ಮತ್ತು ಮಾರಾಟದ ಪ್ರಮಾಣವನ್ನು ಹೆಚ್ಚಿಸುವುದೇ ಮೊದಲಾದ ವಿವಿಧ ಅಭಿವೃದ್ಧಿ ಚಟುವಟಿಕೆಗಳನ್ನು ಈ ಕಛೇರಿಯು ಹಮ್ಮಿಕೊಂಡಿರುತ್ತದೆ.

ಕಿಬ್ಬನಹಳ್ಳಿ ಶೀತಲ ಕೇಂದ್ರಕ್ಕೆ ತಾಂತ್ರಿಕ ಅಧಿಕಾರಿ ಮುಖ್ಯಸ್ಥರಾಗಿದ್ದು, ತಿಪಟೂರು ಚಿಕ್ಕನಾಯಕನಹಳ್ಳಿ ತಾಲೂಕುಗಳ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಶಿರಾ ಶೀತಲ ಕೇಂದ್ರಕ್ಕೆ ಸಹಾಯಕ ವ್ಯವಸ್ಥಾಪಕರು ಮುಖ್ಯಸ್ಥರಾಗಿದ್ದು, ಶಿರಾ ಹಾಗೂ ಪಾವಗಡ ತಾಲೂಕುಗಳ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಮಧುಗಿರಿ ಶೀತಲ ಕೇಂದ್ರಕ್ಕೆ ಸಹಾಯಕ ವ್ಯವಸ್ಥಾಪಕರು ಮುಖ್ಯಸ್ಥರಾಗಿದ್ದು, ಮಧುಗಿರಿ ಹಾಗೂ ಕೊರಟಗೆರೆ ತಾಲೂಕುಗಳ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಯಡಿಯೂರು ಶೀತಲ ಕೇಂದ್ರಕ್ಕೆ ತಾಂತ್ರಿಕ ಅಧಿಕಾರಿ ಮುಖ್ಯಸ್ಥರಾಗಿದ್ದು, ಕುಣಿಗಲ್ ಮತ್ತು ತುರುವೇಕೆರೆ ತಾಲೂಕುಗಳ

ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ ಹಾಗೂ ಬೆಂಗಳೂರು ಮಾರುಕಟ್ಟೆ ಉಪಕಛೇರಿಗೆ ಉಪ ವ್ಯವಸ್ಥಾಪಕರಿದ್ದು, ನೆಲಮಂಗಲ, ಯಶವಂತಪುರದ ಸುತ್ತಮುತ್ತಲ ಪ್ರದೇಶಗಳಲ್ಲೂ ಮಾರುಕಟ್ಟೆ ಜವಾಬ್ದಾರಿ ಹೊಂದಿರುತ್ತಾರೆ. ರಾಜ್ಯ ಮಟ್ಟದಲ್ಲೂ ಕರ್ನಾಟಕ ಸಹಕಾರಿ ಹಾಲು ಮಹಾಮಂಡಲವು ಉನ್ನತ ಕಛೇರಿ (Apex body) ಯಾಗಿ ಕಾರ್ಯನಿರ್ವಹಿಸುತ್ತಿದ್ದು, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಸಹಕಾರಿ ಹಾಲು ಮಹಾಮಂಡಲ, ಬೆಂಗಳೂರು ಡೈರಿ ಸರ್ಕಲ್, ಬೆಂಗಳೂರು, ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

### ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರ ಇಲಾಖೆಗೆ ಸೇರಿದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯು ತುಮಕೂರಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಆಗ ಉಪ ಪರಿಸರ ಅಧಿಕಾರಿ ಎಂದು ಇದ್ದ ಕಛೇರಿ ಮುಖ್ಯಸ್ಥರ ಹುದ್ದೆಯ ಹೆಸರು ೧೯೯೬ರಿಂದ ಪರಿಸರ ಅಧಿಕಾರಿ ಎಂದು ಬದಲಾವಣೆಗೊಂಡಿರುತ್ತದೆ. ತುಮಕೂರು ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುವ ಈ ಕಛೇರಿಯಲ್ಲಿ ಉಪ ಪರಿಸರ ಅಧಿಕಾರಿ, ಸಹಾಯಕ ಪರಿಸರ ಅಧಿಕಾರಿ, ಮೊದಲಾದ ಅಧಿಕಾರಿ, ಸಿಬ್ಬಂದಿ ವರ್ಗ ಕಛೇರಿಯ ಮುಖ್ಯಸ್ಥರ ಕಾರ್ಯನಿರ್ವಹಣೆಯಲ್ಲಿ ನೆರವಾಗುತ್ತಿದ್ದಾರೆ.

ಉದ್ದಿಮೆ, ಆಸ್ಪತ್ರೆ, ಸ್ಥಳೀಯ ಸಂಸ್ಥೆ ಮೊದಲಾದವು ಜಲ, ವಾಯು, ಭೂಮಿ ಇತ್ಯಾದಿಗಳಿಗೆ ಸಂಬಂಧಿಸಿ ಮಾಲಿನ್ಯ ಮಾಡದಂತೆ ನಿಯಂತ್ರಿಸುವುದು ಹಾಗೂ ಮಾಲಿನ್ಯ ಉಂಟು ಮಾಡುವ ಸಂಸ್ಥೆಗಳ ವಿರುದ್ಧ ಕಾನೂನಿನ್ವಯ ಕ್ರಮ ತೆಗೆದುಕೊಳ್ಳುವುದು ಈ ಕಛೇರಿಯ ಮುಖ್ಯ ಧ್ಯೇಯೋದ್ದೇಶವಾಗಿದೆ. ಇದರನ್ವಯ ಜಲಮಾಲಿನ್ಯ ನಿಯಂತ್ರಣ ಕಾಯಿದೆ–೧೯೭೪, ವಾಯುಮಾಲಿನ್ಯ ನಿಯಂತ್ರಣ ಕಾಯಿದೆ–೧೯೮೧, ಜಲ ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ ಉಪಕರ ಅಧಿನಿಯಮ–೧೯೭೭ ಹಾಗೂ ೧೯೯೧ರ ತಿದ್ದುಪಡಿ ಅಧಿನಿಯಮ, ಪರಿಸರ ಸಂರಕ್ಷಣಾ ಕಾಯಿದೆ–೧೯೮೬ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿ ತನ್ನ ಕಾರ್ಯಗಳಲ್ಲಿ ಅನುಸರಿಸುತ್ತಿದೆ. ಶಾಲಾ ಮಕ್ಕಳು ಹಾಗೂ ನಾಗರಿಕರಿಗೆ ಸ್ಥಳೀಯ ಪರಿಸರ ಕುರಿತು ಮಾಹಿತಿ ನೀಡುವ ವಿವಿಧ ಕಾರ್ಯಕ್ರಮಗಳನ್ನು ನಡೆಸುತ್ತಿದೆ. ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

### ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ರಾಜ್ಯ ಲೆಕ್ಕ ಪತ್ರ ಇಲಾಖೆಗೆ ಸೇರಿದ ಈ ಕಛೇರಿಯು ಗ್ರಾಮ ಪಂಚಾಯ್ತಿಗಳು, ಮುಜರಾಯಿ ಸಂಸ್ಥೆಗಳು, ನಗರ ಸಭೆಗಳು, ಪಟ್ಟಣ ಪಂಚಾಯ್ತಿಗಳು, ನಗರಾಭಿವೃದ್ಧಿ ಪ್ರಾಧಿಕಾರಗಳು, ಗ್ರಂಥಾಲಯ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಹಾಗೂ ಸರ್ಕಾರದಿಂದ ಅನುದಾನ ಬರುವ ಸ್ಥಳೀಯ ಸಂಸ್ಥೆಗಳ ಲೆಕ್ಕಪರಿಶೋಧನೆ ಕೈಗೊಂಡು ವರದಿ ಸಲ್ಲಿಸುವುದು, ಅಡ್‌ಹಾಕ್ ಸಮಿತಿಗಳ ಮೂಲಕ ಲೆಕ್ಕಪರಿಶೋಧನಾ ವರದಿಗಳಲ್ಲಿನ ಆಕ್ಷೇಪಣೆ, ತೀರುವಳಿಗೆ ಕ್ರಮವಹಿಸುವುದು ಮೊದಲಾದ ಮುಖ್ಯ ಧ್ಯೇಯ್ಯೋದ್ದೇಶಗಳು ಹಾಗೂ ಕಾರ್ಯಚಟುವಟಿಕೆಗಳೊಂದಿಗೆ ಈ ಕಛೇರಿಯು ೧೯೩೩ರಲ್ಲಿ ತುಮಕೂರಿನಲ್ಲಿ ಆರಂಭಗೊಂಡಿತು. ಸಹಾಯಕ ನಿಯಂತ್ರಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಮಟ್ಟದ ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ಲೆಕ್ಕ ಪರಿಶೋಧನಾಧಿಕಾರಿಗಳು, ಪ್ರಥಮ ದರ್ಜೆ ಲೆಕ್ಕ ಸಹಾಯಕರು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರು ಮತ್ತಿತರ ಸಿಬ್ಬಂದಿ ವರ್ಗವಿದ್ದು, ಇವರಿಗೆ ದೈನಂದಿನ ಆಡಳಿತದಲ್ಲಿ ನೆರವಾಗುತ್ತಿದ್ದಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಬಡ್ಜೆಟ್ ಮ್ಯಾನ್ಯುಯಲ್, ಕರ್ನಾಟಕ ಟ್ರಜರಿ ಕೋಡ್ ಮತ್ತಿತರ ನಿಯಮ, ಅಧಿನಿಯಮಗಳನ್ನು ತನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಅನುಸರಿಸಲಾಗುತ್ತಿದೆ. ನಿಯಂತ್ರಕರು ರಾಜ್ಯ ಲೆಕ್ಕಪತ್ರ ಇಲಾಖೆ ಬೆಂಗಳೂರು ಅವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

### ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಕುಟುಂಬ ಕಲ್ಯಾಣ ಸೇವೆಗಳನ್ನೊಳಗೊಂಡಂತೆ ಸಾರ್ವಜನಿಕ ಆರೋಗ್ಯ ಪ್ರಾಮುಖ್ಯತೆಯ ವಿವಿಧ ರಾಷ್ಟ್ರೀಯ ಮತ್ತು ರಾಜ್ಯ ಆರೋಗ್ಯ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಕಛೇರಿಯು ೧೯೪೪ರಿಂದ ಕಾರ್ಯನಿರ್ವಹಿಸುತ್ತಿರಬಹುದೆಂದು ತಿಳಿದು ಬರುತ್ತದೆ. ಕಾರಣ

ತುಮಕೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಹುದ್ದೆ ೧೯೪೪ ರಲ್ಲಿ ಮಂಜೂರಾಗಿದೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ, ದಿ.೧/೦೪/೧೯೮೭ ರಿಂದ ಜಿಲ್ಲಾ ಪಂಚಾಯತ್, ತುಮಕೂರು ವ್ಯಾಪ್ತಿಗೆ ಒಳಪಡಿಸಲಾಗಿರುತ್ತದೆ, ಇವರಿಗೆ ಆಡಳಿತದಲ್ಲಿ ನೆರವಾಗಲು ಜಿಲ್ಲಾ ಆರ್.ಸಿ.ಹೆಚ್.ಅಧಿಕಾರಿಗಳು, ಜಿಲ್ಲಾ ಕುಟುಂಬ ಕಲ್ಯಾಣಾಧಿಕಾರಿಗಳು, ರಜೆ ಮೀಸಲು ವೈದ್ಯಾಧಿಕಾರಿಗಳು, ಸಹಾಯಕ ಆಡಳಿತ ಅಧಿಕಾರಿಗಳು, ಜಿಲ್ಲಾ ನರ್ಸಿಂಗ್ ಅಧಿಕಾರಿಗಳು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳು, ಸಹಾಯಕ ಸಾಂಖ್ಯಿಕ ಅಧಿಕಾರಿ, ಕಛೇರಿ ಅಧೀಕ್ಷಕರು, ಸೇವಾ ಅಭಿಯಂತರರು, ಸ್ಕಿಲ್ಡ್ ಟ್ರೇಡ್‌ಮನ್, ರೆಫ್ರಿಜರೇಟರ್ ಮೆಕ್ಯಾನಿಕ್, ಆರೋಗ್ಯ ಮೇಲ್ವಿಚಾರಕರು, ಸೆಮಿ ಸ್ಕಿಲ್ಡ್ ಆರ್ಟಿಸನ್, ಚಲನಚಿತ್ರ ಪ್ರದರ್ಶಕರು, ಹಿರಿಯ ಮಹಿಳಾ ಆರೋಗ್ಯ ಸಹಾಯಕಿ ಮತ್ತಿತರ ೬೭ ಅಧಿಕಾರಿ ಸಿಬ್ಬಂದಿ ವರ್ಗವಿರುತ್ತದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ (ಕೆ.ಎಫ್.ಸಿ), ಕರ್ನಾಟಕ ಬಡ್ಜೆಟ್ ಮ್ಯಾನ್ಯುಯಲ್, ಕರ್ನಾಟಕ ಟ್ರಜರಿ ಕೋಡ್ ಮತ್ತಿತರ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಅನುಸರಿಸಲಾಗುತ್ತಿದೆ.

ಈ ಕಛೇರಿ ವ್ಯಾಪ್ತಿಯಲ್ಲಿ ಜಿಲ್ಲಾ ಕಾರ್ಯಕ್ರಮ ಅಧಿಕಾರಿಗಳು, ೧೦ ತಾಲೂಕು ಆರೋಗ್ಯಾಧಿಕಾರಿಗಳು, ಒಂಬತ್ತು ತಾಲೂಕು ಮಟ್ಟದ ಸಾರ್ವಜನಿಕ ಆಸ್ಪತ್ರೆಗಳು, ನಾಲ್ಕು ಸಮುದಾಯ ಆರೋಗ್ಯ ಕೇಂದ್ರಗಳು, ೧೩೯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ಇತರೆ ಒಂಬತ್ತು ಆರೋಗ್ಯ ಸಂಸ್ಥೆಗಳು ಒಳಪಡುತ್ತವೆ.

ರಾಷ್ಟ್ರೀಯ ಮಲೇರಿಯಾ ಕಾರ್ಯಕ್ರಮ, ರಾಷ್ಟ್ರೀಯ ಅಂಧತ್ವ ನಿಯಂತ್ರಣ ಕಾರ್ಯಕ್ರಮ, ರಾಷ್ಟ್ರೀಯ ಕುಷ್ಠರೋಗ ನಿರ್ಮೂಲನಾ ಕಾರ್ಯಕ್ರಮ, ರಾಷ್ಟ್ರೀಯ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ, ತಾಯಿ–ಮಕ್ಕಳ ಆರೋಗ್ಯ ಕಾರ್ಯಕ್ರಮ, ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ, ಆರೋಗ್ಯ ರಕ್ಷಣಾ ಕಾರ್ಯಕ್ರಮ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ ಕಾರ್ಯಕ್ರಮ, ಸಾಂಕ್ರಾಮಿಕ ರೋಗಗಳ ನಿವಾರಣ ಕಾರ್ಯಕ್ರಮ, ಶಾಲಾ ಮಕ್ಕಳ ಆರೋಗ್ಯ ಕಾರ್ಯಕ್ರಮ, ಪೌಷ್ಠಿಕ ಆಹಾರ ಕಾರ್ಯಕ್ರಮ, ಮಾಹಿತಿ ಶಿಕ್ಷಣ ಸಂಪರ್ಕ ಕಾರ್ಯಕ್ರಮ, ಮಾನಸಿಕ ಆರೋಗ್ಯ ಕಾರ್ಯಕ್ರಮ ಮೊದಲಾದ ಆರೋಗ್ಯ ಕಾರ್ಯ ಚಟುವಟಿಕೆಗಳಲ್ಲಿ ಇಲಾಖೆಯು ತೊಡಗಿದೆ. ಜಿಲ್ಲೆಯ ೧೦ ತಾಲೂಕುಗಳ ಎಲ್ಲಾ ಆರೋಗ್ಯ ಸಂಸ್ಥೆಗಳ ಆಡಳಿತ ಮೇಲ್ವಿಚಾರಣೆ ಹಾಗೂ ಎಲ್ಲಾ ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಅನುಷ್ಠಾನ ಮತ್ತು ಪ್ರಗತಿ ಪರಿಶೀಲನೆ ಮಾಡುವ ಅಧಿಕಾರವಿರುತ್ತದೆ. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯ, ಬೆಂಗಳೂರು ಇವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

### ತೋಟಗಾರಿಕೆ ಇಲಾಖೆ

ಸಾರ್ವಜನಿಕರಿಗೆ ಅಡಿಕೆ, ತೆಂಗು, ಬಾಳೆ, ಮಾವು, ಸಪೋಟ, ದಾಳಿಂಬೆ, ನುಗ್ಗೆ, ಪಪ್ಪಾಯಿ, ದ್ರಾಕ್ಷಿ, ತರಕಾರಿ, ಅಣಬೆ, ಹೂವು, ಔಷಧಿ ಹಾಗೂ ಸುಗಂಧ ದ್ರವ್ಯ ಸಸ್ಯಗಳು ಹಾಗೂ ಇತರೆ ತೋಟಗಾರಿಕೆ ಬೆಳೆಗಳನ್ನು ವೈಜ್ಞಾನಿಕವಾಗಿ ಬೆಳೆಸುವ ಬಗ್ಗೆ ಮಾಹಿತಿ, ಮಾರ್ಗದರ್ಶನ ಹಾಗೂ ತಾಂತ್ರಿಕ ನೆರವನ್ನು ನೀಡುವ ಉದ್ದೇಶದಿಂದ ತುಮಕೂರಿನಲ್ಲಿ ತೋಟಗಾರಿಕೆ ಉಪನಿರ್ದೇಶಕರ ಕಛೇರಿಯು ಕಾರ್ಯನಿರ್ವಹಿಸುತ್ತಿದೆ. ತೋಟಗಾರಿಕೆ ಉಪನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರ ನೆರವಿಗೆ ಕೇಂದ್ರ ಸ್ಥಾನ ಸಹಾಯಕರು, ಸಹಾಯಕ ತೋಟಗಾರಿಕೆ ನಿರ್ದೇಶಕರು (ಎನ್.ಹೆಚ್.ಎಂ), ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಸಹಾಯಕ ತೋಟಗಾರಿಕಾ ನಿರ್ದೇಶಕರು, ಸಹಾಯಕ ತೋಟಗಾರಿಕೆ ಅಧಿಕಾರಿಗಳು, ಸಹಾಯಕ ಸಾಂಖ್ಯಿಕ ಅಧಿಕಾರಿ, ತೋಟಗಾರಿಕೆ ಸಹಾಯಕರು, ಮೊದಲಾದ ೧೨೮ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗವಿದೆ. ಮಾಹಿತಿ ಹಕ್ಕು ಕಾಯಿದೆ ಅಧಿನಿಯಮಗಳು, ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮತ್ತಿತರ ನಿಯಮ ಅಧಿನಿಯಮಗಳನ್ನು ಕಛೇರಿಯ ದೈನಂದಿನ ಚಟುವಟಿಕೆಗಳಲ್ಲಿ ಅನುಸರಿಸುತ್ತಿದೆ.

ರೈತ ಸಮೂಹದ ಅನುಕೂಲಕ್ಕಾಗಿ ತೋಟಗಾರಿಕೆ ಇಲಾಖೆಯಿಂದ ಕೇಂದ್ರ ಪುರಸ್ಕೃತ ಕಾರ್ಯಕ್ರಮಗಳಾದ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆ, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ

ಯೋಜನೆ, ಸೂಕ್ಷ್ಮ ಹನಿ ನೀರಾವರಿ ಯೋಜನೆ, ರಾಜ್ಯವಲಯದಿಂದ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಗಳಡಿಯಲ್ಲಿ ತೋಟಗಾರಿಕಾ ಪ್ರದೇಶ ವಿಸ್ತರಣೆ, ಕೃಷಿ ಹೊಂಡ, ಪ್ಯಾಕ್ ಹೌಸ್, ರೈತರಿಗೆ ತರಬೇತಿ, ಎರೆಹುಳು ಘಟಕ ಹಾಗೂ ಸಾವಯವ ಪರಿವರ್ತನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅಡಿಕೆ, ತೆಂಗು, ಬಾಳೆ, ಮಾವು, ಸಪೋಟ, ದಾಳಿಂಬೆ, ನುಗ್ಗೆ, ಪಪ್ಪಾಯಿ, ದ್ರಾಕ್ಷಿ ಮತ್ತು ಇತರೆ ತೋಟಗಾರಿಕೆ ಬೆಳೆ ಬೆಳೆಯುವ ರೈತರಿಗೆ ಹನಿ ನೀರಾವರಿ ಅಳವಡಿಕೆಗೆ ಸಹಾಯಧನ ನೀಡಿ ರೈತರನ್ನು ಪ್ರೋತ್ಸಾಹಿಸಲಾಗುತ್ತಿದೆ. ರೈತರಿಗೆ ತರಬೇತಿ, ಪ್ರಾತ್ಯಕ್ಷತೆಗಳು, ವಿಚಾರ ಸಂಕಿರಣ, ಫಲಪುಷ್ಪ ಪ್ರದರ್ಶನ, ಪ್ರವಾಸ ಕಾರ್ಯಕ್ರಮಗಳ ಮೂಲಕ ರೈತರಿಗೆ ತೋಟಗಾರಿಕೆಯಲ್ಲಿ ಇರುವಂತಹ ಹೊಸ ತಂತ್ರಜ್ಞಾನವನ್ನು ಪರಿಚಯಿಸಲಾಗುತ್ತಿದೆ. ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ರೈತ ಫಲಾನುಭವಿಗಳಿಗೆ ಸಹಾಯಧನವನ್ನು ನೀಡುತ್ತಿರುವುದರಿಂದ ಪ್ರತಿ ವರ್ಷವೂ ತೋಟಗಾರಿಕಾ ಪ್ರದೇಶವು ಶೇ.೬ರಷ್ಟು ಹೆಚ್ಚಾಗುತ್ತಿದೆ. ಇಲಾಖೆಯ ಕ್ಷೇತ್ರ ಮತ್ತು ನರ್ಸರಿಗಳಲ್ಲಿ ವಿವಿಧ ತೋಟಗಾರಿಕಾ ಬೆಳೆಗಳ ಕಸಿ ಗಿಡಗಳನ್ನು ಉತ್ಪಾದಿಸಿ ರೈತರಿಗೆ ನೀಡುವುದು, ರೈತರಿಗೆ ತರಬೇತಿಗಳು ಹಾಗೂ ವಿಚಾರ ಸಂಕೀರ್ಣ ಇತ್ಯಾದಿಗಳಿಂದ ರೈತರಿಗೆ ತೋಟಗಾರಿಕೆಯಲ್ಲಿ ಹೊಸ ತಂತ್ರಜ್ಞಾನಗಳನ್ನು ಪರಿಚಯಿಸಲಾಗುತ್ತಿದೆ.

ಉಪನಿರ್ದೇಶಕರ ಅಧೀನದಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಲ್ಲಾ ಪಂಚಾಯತ್, ತುಮಕೂರು, ತಿಪಟೂರು, ಗುಬ್ಬಿ ಹಾಗೂ ಚಿಕ್ಕನಾಯಕನಹಳ್ಳಿಗಳಲ್ಲಿದ್ದು, ಆಯಾ ತಾಲೂಕು ಅಧಿಕಾರಿ ವ್ಯಾಪ್ತಿ ಹೊಂದಿರುತ್ತಾರೆ. ಸಹಾಯಕ ತೋಟಗಾರಿಕೆ ನಿರ್ದೇಶಕರು ಜಿಲ್ಲಾ ಪಂಚಾಯತ್ – ಮಧುಗಿರಿ, ತುರುವೇಕೆರೆ, ಶಿರಾ, ಕೊರಟಗೆರೆ ಹಾಗೂ ಪಾವಗಡಗಳಲ್ಲಿದ್ದು, ಆಯಾ ತಾಲೂಕು ಅಧಿಕಾರ ವ್ಯಾಪ್ತಿ ಹೊಂದಿರುತ್ತಾರೆ. ತೋಟಗಾರಿಕೆ ಜಂಟಿ ನಿರ್ದೇಶಕರು, ಲಾಲ್‌ಬಾಗ್ ಬೆಂಗಳೂರು ಇವರು ಈ ಕಛೇರಿಗೆ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿಯು ತುಮಕೂರಿನಲ್ಲಿ ೧೯೭೬ ರಿಂದಲೂ ಕಾರ್ಯನಿರ್ವಹಿಸುತ್ತಿದ್ದು, ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿ ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಗ್ರಾಮೀಣ ಯುವಕರಲ್ಲಿ ಕ್ರೀಡಾಭಿಮಾನ ಬೆಳೆಸಿ ಕ್ರೀಡಾಭಿವೃದ್ಧಿಗೆ ಉತ್ತೇಜನ ನೀಡುವುದು ಈ ಕಾರ್ಯಾಲಯದ ಪ್ರಮುಖ ಧ್ಯೇಯೋದ್ದೇಶವಾಗಿದೆ. ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ದಸರಾ ಕ್ರೀಡಾಕೂಟ, ರಾಜೀವ್‌ಗಾಂಧಿ ಖೇಲ್ ಅಭಿಯಾನ್(ಆರ್.ಜಿ.ಕೆ.ಎ), ಇದರ ಉದ್ದೇಶ ಕ್ರೀಡಾ ಮೂಲ ಸೌಕರ್ಯ ಉಪಕರಣಗಳನ್ನು ಒದಗಿಸುವುದರ ಮೂಲಕ ಪಂಚಾಯ್ತಿಗಳ ಮಟ್ಟದಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಕ್ರೀಡೆಯ ಬಗ್ಗೆ ಉತ್ತೇಜನ ನೀಡುವುದಾಗಿರುತ್ತದೆ. ಗ್ರಾಮೀಣ ಕ್ರೀಡಾಕೂಟ, ಮಹಿಳಾ ಕ್ರೀಡಾಕೂಟ, ವಿಕಲಚೇತನರ ಕ್ರೀಡಾಕೂಟ, ಯುವಜನಮೇಳ, ಯುವಜನೋತ್ಸವ, ಬೇಸಿಗೆ ತರಬೇತಿ ಶಿಬಿರ ಹಾಗೂ ಸರ್ಕಾರಿ ನೌಕರರ ಕ್ರೀಡಾ ಕೂಟಗಳನ್ನು ಪ್ರತಿವರ್ಷ ಕಾಲಕಾಲಕ್ಕೆ ನಡೆಸುವುದು ಈ ಕಛೇರಿಯ ಜವಾಬ್ದಾರಿಯಾಗಿದೆ. ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಇಲಾಖಾ ಮುಖ್ಯಸ್ಥರನ್ನು ಹೊರತುಪಡಿಸಿ ಮೂರು ಜನ ಸಿಬ್ಬಂದಿ ಇದ್ದಾರೆ. ಅಲ್ಲದೇ, ಕರ್ನಾಟಕ ಕ್ರೀಡಾ ಪ್ರಾಧಿಕಾರದಿಂದ ನಿಯುಕ್ತಿಗೊಂಡ ಅಥ್ಲೆಟಿಕ್ಸ್, ಹಾಕಿ, ಜಿಮ್ನಾಸ್ಟಿಕ್ಸ್ ಮತ್ತು ಕಬಡ್ಡಿ ತರಬೇತುದಾರರು ಸಹ ಕಾರ್ಯನಿರ್ವಹಿಸುತ್ತಿದ್ದಾರೆ.

ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಹಣಕಾಸು ಸಂಹಿತೆ, ಕರ್ನಾಟಕ ಟ್ರಜರಿ ಕೋಡ್, ಯೂತ್ ಸರ್ವಿಸ್ ಮ್ಯಾನ್ಯೂಯಲ್ ಮೊದಲಾದ ನಿಯಮ ಅಧಿನಿಯಮಗಳನ್ನು ಕಛೇರಿಯು ತನ್ನ ದೈನಂದಿನ ಆಡಳಿತದಲ್ಲಿ ಅನುಸರಿಸುತ್ತಿದೆ. ಜಿಲ್ಲೆಯ ಗ್ರಾಮೀಣ ಮತ್ತು ನಗರ ಪ್ರದೇಶಗಳ ವಿದ್ಯಾರ್ಥಿ ಮತ್ತು ವಿದ್ಯಾರ್ಥಿಗಳಲ್ಲದ ಯುವಜನರು ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಚನಾತ್ಮಕವಾಗಿ ತಮ್ಮನ್ನು ತೊಡಗಿಸಿಕೊಳ್ಳಲು ಮತ್ತು ತಮ್ಮ ಪ್ರತಿಭೆಯನ್ನು ಅಭಿವೃದ್ಧಿಪಡಿಸಲು, ಸ್ವಯಂ ಉದ್ಯೋಗದಲ್ಲಿ ತೊಡಗಲು ಕ್ರೀಡೆ ಮತ್ತು ಆಟೋಟಗಳಲ್ಲಿ ಉತ್ತಮ ಸಾಧನಾ ಮಟ್ಟ ತಲುಪಲು ಈ ಇಲಾಖೆಯು ಬೆಂಗಳೂರಿನ ವಿದ್ಯಾನಗರ ಮತ್ತು ಕುಂಬಳಗೋಡು ತರಬೇತಿ ಶಿಬಿರ ಹಾಗೂ ವಿವಿಧ ಕಾರ್ಯಕ್ರಮಗಳಿಗೆ ಜಿಲ್ಲೆಯ ಯುವಕ/ಯುವತಿಯರನ್ನು ಆಯ್ಕೆಮಾಡಿ ಕಳುಹಿಸಿಕೊಡಲಾಗುತ್ತದೆ.

ಕ್ರೀಡಾಕೂಟ ಮತ್ತು ರ್‍ಯಾಲಿಗಳ ಸಂಘಟನೆ ಹಾಗೂ ಅದರಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ ಹಾಗೂ ದಿನಭತ್ಯೆ ನೀಡುವುದು, ಕ್ರೀಡಾಂಗಣ ಮತ್ತು ಇತರೆ ನಿರ್ಮಾಣಗಳ ನಿರ್ವಹಣೆ, ಕ್ರೀಡಾ ಶಾಲೆಗಳು, ಕಷ್ಟ ಪರಿಸ್ಥಿತಿಯಲ್ಲಿರುವ ಕ್ರೀಡಾಪಟುಗಳಿಗೆ ಆರ್ಥಿಕ ನೆರವು ನೀಡುವುದು, ಗ್ರಾಮೀಣ ಕ್ರೀಡಾ ಕೇಂದ್ರಗಳು ಹಾಗೂ ಒಳಾಂಗಣ ಕ್ರೀಡಾಂಗಣ ಮತ್ತು ಬಯಲು ರಂಗಮಂದಿರಗಳ ನಿರ್ಮಾಣಕ್ಕೆ ಅನುದಾನ ನೀಡುವುದು ಮುಂತಾದವು ಇಲಾಖೆಯ ವಿವಿಧ ಯೋಜನೆಗಳು ಹಾಗೂ  ಅಭಿವೃದ್ಧಿ ಚಟುವಟಿಕೆಗಳಾಗಿವೆ. ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಬೆಂಗಳೂರು ರವರು ಈ ಇಲಾಖೆಯ ಮೇಲಧಿಕಾರಿಗಳಾಗಿರುತ್ತಾರೆ.

## ವಾರ್ತಾ, ಸಾರ್ವಜನಿಕ ಸಂಪರ್ಕ ಇಲಾಖೆ

ಸರ್ಕಾರದ ಅಭಿವೃದ್ಧಿ ಯೋಜನೆ ಹಾಗೂ ಸಾಧನೆಗಳನ್ನು ಪತ್ರಿಕಾ ಸಂಪರ್ಕ ಮತ್ತು ವಿವಿಧ ಕಾರ್ಯಕ್ರಮಗಳ ಮೂಲಕ ಜಿಲ್ಲಾ ಮಟ್ಟದಲ್ಲಿ ಪ್ರಚುರಪಡಿಸುವ ಮುಖ್ಯ ಧ್ಯೇಯೋದ್ದೇಶದೊಂದಿಗೆ ತುಮಕೂರಿನಲ್ಲಿ ಜಿಲ್ಲಾ ವಾರ್ತಾ ಕಛೇರಿಯು ಮಾರ್ಚಿ ೧೯೬೬ರಲ್ಲಿ ಆರಂಭಗೊಂಡಿತು. ಆದರೆ ೨೦೧೫ರಿಂದ ಸದರಿ ಕಛೇರಿಯು ಜಿಲ್ಲಾ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಎಂದು ಮರು ನಾಮಕರಣಗೊಂಡಿದೆ. ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುವ ಹಿರಿಯ ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ವಾರ್ತಾ ಸಹಾಯಕರು, ಪ್ರಥಮ ದರ್ಜೆ ಸಹಾಯಕರು ಮೊದಲಾದ ಸಿಬ್ಬಂದಿ ವರ್ಗವಿದ್ದು, ಮುಖ್ಯಸ್ಥರಿಗೆ ಕಛೇರಿ ಕೆಲಸದಲ್ಲಿ ನೆರವಾಗುತ್ತಿದ್ದಾರೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು ಮೊದಲಾದ ಇಲಾಖಾ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಆಡಳಿತದ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಸುದ್ಧಿ ಮತ್ತು ಪತ್ರಿಕಾ ವಿಭಾಗದಲ್ಲಿ ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳು, ಕಲ್ಯಾಣ ಕಾರ್ಯಕ್ರಮಗಳು ಹಾಗೂ ಸಾಧನೆಗಳನ್ನು ಎಲ್ಲಾ ಸರ್ಕಾರದ ಮಾಧ್ಯಮಗಳನ್ನು ಬಳಸಿಕೊಂಡು ಜನತೆಗೆ ಮುಟ್ಟಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರಮುಖವಾಗಿ ಪತ್ರಿಕೆಗಳು, ಆಕಾಶವಾಣಿ, ದೂರದರ್ಶನ ಹಾಗೂ ವಿವಿಧ ಮಾಧ್ಯಮಗಳನ್ನು ಬಳಸಿಕೊಂಡು ಪ್ರಚಾರ ನೀಡುವುದರ ಜೊತೆಗೆ ಪತ್ರಿಕಾ ಪ್ರಕಟಣೆಗಳ ಬಿಡುಗಡೆ, ವಿಶೇಷ ಲೇಖನಗಳ ಬಿಡುಗಡೆ, ಪತ್ರಿಕೆಗಳಲ್ಲಿನ ಪ್ರಮುಖ ಮತ್ತು ಗಮನಾರ್ಹ ಸುದ್ದಿಗಳ ತುಣುಕುಗಳನ್ನು ಸರ್ಕಾರದ ಸಂಬಂಧಪಟ್ಟ ಸಚಿವರು ಹಾಗೂ ಇಲಾಖೆಗಳಿಗೆ ಕಳುಹಿಸುವುದು ಹಾಗೂ ಸ್ಪಷ್ಟೀಕರಣ ನೀಡುವುದು ಪತ್ರಿಕಾ ಗೋಷ್ಠಿ ಆಯೋಜಿಸುವುದು, ಸರ್ಕಾರದ ಕಾರ್ಯಕ್ರಮ ಹಾಗೂ ಅಭಿವೃದ್ಧಿ ಯೋಜನೆಗಳ ಸ್ಥಳಕ್ಕೆ ಪತ್ರಕರ್ತರನ್ನು ಕರೆದೊಯ್ಯುವುದು, ಪ್ರಚಾರ ಕೊಡುವುದು, ಸಂಗೀತ, ನಾಟಕ, ಜಾನಪದ ಕಾರ್ಯಕ್ರಮಗಳ ಮೂಲಕ ಜನ ಜಾಗೃತಿ ಮೂಡಿಸುವ ಕಾರ್ಯವನ್ನು ಆದ್ಯತೆ ಮೇಲೆ ನಿರ್ವಹಿಸಲಾಗುತ್ತಿದೆ. ಪತ್ರಕರ್ತರ ಮಾಶಾಸನ ಮತ್ತು ಮಾನ್ಯತೆ ಬಗ್ಗೆ ವ್ಯವಹರಿಸಿ ಅಗತ್ಯ ಮಂಜೂರಾತಿ ದೊರಕಿಸಿಕೊಡುವುದು ಮೊದಲಾದ ಗುರುತರ ಕೆಲಸಗಳನ್ನು ನಿರ್ವಹಿಸುತ್ತಿದೆ. ಕ್ಷೇತ್ರ ಪ್ರಚಾರ ಕಾರ್ಯಕ್ರಮದಂತೆ ರಾಜ್ಯ ಸರ್ಕಾರದ ಜನಹಿತ ಕಲ್ಯಾಣ ಯೋಜನೆಗಳನ್ನು ಜಿಲ್ಲೆಯ ಎಲ್ಲಾ ತಾಲೂಕುಗಳ ಅತಿ ಹಿಂದುಳಿದ ಪ್ರದೇಶಗಳಿಗೆ ಭೇಟಿ ನೀಡಿ ವಸ್ತುಪ್ರದರ್ಶನ, ಕಿರುಚಿತ್ರ ಪ್ರದರ್ಶನ, ಸಂಗೀತ ಹಾಗೂ ಬೀದಿ ನಾಟಕಗಳು, ವಿಚಾರ ಸಂಕಿರಣ ಮುಂತಾದವುಗಳನ್ನು ಏರ್ಪಡಿಸುವ ಮೂಲಕ ನಾಡಿನ ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ, ಜನಜೀವನದ ಬಗ್ಗೆ ತಿಳುವಳಿಕೆ ಮೂಡಿಸುವುದು, ವಾಣಿಜ್ಯ ಪ್ರಚಾರ ವಿಭಾಗದಲ್ಲಿ ರಾಜ್ಯದಲ್ಲಿನ ವಿವಿಧ ಸರ್ಕಾರಿ ಇಲಾಖೆಗಳ ಯಾವುದೇ ಟೆಂಡರ್, ಹರಾಜು, ನೋಟೀಸು, ನೇಮಕಾತಿ ಮುಂತಾದ ವರ್ಗೀಕೃತ ಜಾಹಿರಾತುಗಳನ್ನು ದಿನಪತ್ರಿಕೆಗಳಿಗೆ ಬಿಡುಗಡೆ ಮಾಡುವುದು ಇನ್ನಿತರ ಚಟುವಟಿಕೆಗಳಲ್ಲಿ ಇಲಾಖೆಯು ನಿರತವಾಗಿದೆ. ನಿರ್ದೇಶಕರು, ವಾರ್ತಾ, ಸಾರ್ವಜನಿಕ ಸಂಪರ್ಕ ಇಲಾಖೆ ಬೆಂಗಳೂರು ರವರು ಈ ಕಛೇರಿಯ ಮೇಲಧಿಕಾರಿಗಳಾಗಿದ್ದಾರೆ.

## ಸಹಕಾರ ಸಂಘಗಳ ಉಪನಿಬಂಧಕರ ಕಛೇರಿ

ಈ ಕಛೇರಿಯು ಸಹಕಾರ ಇಲಾಖೆಗೆ ಸೇರಿದ್ದು, ಆರಂಭದಲ್ಲಿ ಸಹಾಯಕ ನಿಬಂಧಕರು ತುಮಕೂರು ಜಿಲ್ಲೆಯಲ್ಲಿ ಆಡಳಿತಾತ್ಮಕ ಅಧಿಕಾರವನ್ನು ಹೊಂದಿದ್ದು, ಮತ್ತೆ ೧೯೬೬ರಲ್ಲಿ ಈ ಇಲಾಖೆಯನ್ನು ಪುನರಚಿಸಿ

ಉಪನೋಂದಣಾಧಿಕಾರಿಗಳನ್ನು ನೇಮಿಸಲಾಯಿತು. ಸಹಕಾರ ಸಂಘಗಳ ಉಪನಿಬಂಧಕರು ಜಿಲ್ಲಾವ್ಯಾಪ್ತಿಯ ಆಡಳಿತಾಧಿಕಾರ ಹೊಂದಿದ್ದು, ಇವರಿಗೆ ಒಬ್ಬ ಸಹಕಾರ ಅಭಿವೃದ್ಧಿ ಅಧಿಕಾರಿ, ಒಬ್ಬ ಅಧೀಕ್ಷಕರು, ಮೂವರು ಸಹಕಾರ ಸಂಘಗಳ ಹಿರಿಯ ನಿರೀಕ್ಷಕರು, ಇಬ್ಬರು ಸಹಕಾರ ಸಂಘಗಳ ನಿರೀಕ್ಷಕರು, ಇಬ್ಬರು ಪ್ರಥಮದರ್ಜೆ ಸಹಾಯಕರು ಸೇರಿದಂತೆ ಒಟ್ಟು ೧೫ ಮಂದಿ ಸಿಬ್ಬಂದಿ ವರ್ಗವಿತ್ತು. ಸಹಕಾರ ಸಂಘಗಳ ಕಾಯ್ದೆ ೧೯೫೯ ಮತ್ತು ನಿಯಮಗಳು ೧೯೬೦, ಸಹಕಾರ ಕಾಯ್ದೆ, ಲೇವಾದೇವಿ ಕಾಯ್ದೆ, ಗಿರವಿ ಕಾಯ್ದೆ, ಚೀಟಿ ಕಾಯ್ದೆ ಇನ್ನಿತರ ನಿಯಮ ಅಧಿನಿಯಮಗಳನ್ನು ಇಲಾಖೆಯು ತನ್ನ ದೈನಂದಿನ ಆಡಳಿತದಲ್ಲೂ ಅನುಸರಿಸುತ್ತಿದೆ.

ಸಹಕಾರ ಸಂಘಗಳ ನೋಂದಣಿ, ಮೇಲ್ವಿಚಾರಣೆ, ಸಮಾಪನೆ ರದ್ದು ಪಡಿಸುವುದು, ಸಹಕಾರ ಸಂಘಗಳಿಗೆ ಸರ್ಕಾರದಿಂದ ಅನುದಾನ, ಸಹಾಯಧನ ಕಟ್ಟಡ ನಿರ್ಮಾಣಕ್ಕಾಗಿ ಸಾಲ ಸೌಲಭ್ಯ ಕೊಡಿಸುವುದು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸದಸ್ಯರ ನೋಂದಣಿಗೆ ಷೇರು ಹಣ ಕೊಡಿಸುವುದು, ಯಶಸ್ವಿನಿ ಯೋಜನೆ ಅಡಿಯಲ್ಲಿ ಸದಸ್ಯರನ್ನು ನೋಂದಣಿ ಮಾಡಿಸಿ ಫಲಾನುಭವಿಗಳಿಗೆ ಚಿಕಿತ್ಸೆ, ಶಸ್ತ್ರ ಚಿಕಿತ್ಸೆಗಳಿಗೆ ಅನುಕೂಲ ಮಾಡಿಸಿ ಕೊಡುವುದು, ಸಹಕಾರಿ ರೈತರಿಗೆ ಅನುಕೂಲ ಆಗುವಂತಹ ರೀತಿಯಲ್ಲಿ ಕಿಸಾನ್ ಕ್ರೆಡಿಟ್ ಕಾರ್ಡುಗಳ ಸೌಲಭ್ಯವನ್ನು ಜಾರಿಗೆ ತರುವುದು, ಸಹಕಾರ ಸಂಘಗಳ ಮೂಲಕ ತಾಲೂಕು ಪಂಚಾಯತ್, ಜಿಲ್ಲಾ ಪಂಚಾಯತ್, ರಾಜ್ಯ ಯೋಜನೆ, ಕೇಂದ್ರ ಯೋಜನೆ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು. ಸೌಹಾರ್ದ ಕಾಯ್ದೆ ಅಡಿ ಸಹಕಾರಿಗಳನ್ನು ನೋಂದಾಯಿಸುವುದು, ಲೇವಾದೇವಿ ವರ್ಗಾವಣೆ, ಹಣಕಾಸು ಸಂಸ್ಥೆಗಳಿಗೆ ಮತ್ತು ಗಿರವಿದಾರರಿಗೆ ಪರವಾನಗಿಗಳನ್ನು ನೀಡುವುದು, ಮೇಲ್ವಿಚಾರಣೆ, ಪರಿವೀಕ್ಷಣೆ, ರದ್ಧತಿ ಕೆಲಸಗಳನ್ನು ಕೈಗೊಳ್ಳುವುದು.

ಜಿಲ್ಲಾ ಪಂಚಾಯತ್ ಕಾರ್ಯಕ್ರಮದ ರಾಜ್ಯ ಯೋಜನೆಯಲ್ಲಿ ಜಿಲ್ಲೆಯಲ್ಲಿನ ಸಹಕಾರ ಸಂಘಗಳಲ್ಲಿ ೨೦೧೨-೧೩ನೇ ಸಾಲಿನವರೆಗೆ ಮಹಿಳೆಯರನ್ನು ಸದಸ್ಯರಾಗಿ ನೋಂದಾಯಿಸಲು ಜಿಲ್ಲೆಗೆ ರೂ. ೧.೦೦ ಲಕ್ಷ ಆಯವ್ಯಯ ನಿಗದಿ ಪಡಿಸಿಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ವ್ಯಾಪಾರ ಅಭಿವೃದ್ಧಿಗೊಳಿಸಲು ಜಿಲ್ಲೆಯಲ್ಲಿ ತಾಲೂಕಿಗೆ ಒಂದು ಸಂಘದಂತೆ ತಲಾ ರೂ. ೨೦,೦೦೦ ರಂತೆ ೧೦ ಸಂಘಗಳಿಗೆ ಷೇರು ಬಂಡವಾಳ ಒದಗಿಸುತ್ತಿದೆ ಹಾಗೂ ಎರಡು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಗೋದಾಮು ರಿಪೇರಿ ಮಾಡುವ ಉದ್ದೇಶಕ್ಕಾಗಿ ರೂ. ೧.೭೭ ಲಕ್ಷಗಳನ್ನು ಒದಗಿಸಲಾಗುತ್ತಿದೆ.

ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳು (ಪಿಸಿಎಆರ್‌ಡಿ) ಪರಿಶಿಷ್ಟ ಜಾತಿಯವರಿಗೆ ಆಸ್ತಿ ಸೃಷ್ಟಿಗೆ ಸಾಲ ನೀಡಿದ ಸಾಲದ ಮೇಲೆ ಶೇ.೬೦% ರಷ್ಟು ಸಹಾಯಧನವನ್ನು ವಿಶೇಷ ಘಟಕ ಯೋಜನೆಯಡಿ ತಾಲೂಕು ಪಂಚಾಯ್ತಿ ಮೂಲಕ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಜಿಲ್ಲೆಯ ೧೦ ಬ್ಯಾಂಕಿಗೆ ತಲಾ ರೂ. ೬೦,೦೦೦ ದಂತೆ ಸಹಾಯಧನ ಒದಗಿಸಲಾಗುತ್ತಿದೆ.

ರಾಜ್ಯ ಯೋಜನೆಯಲ್ಲಿ ಕೇಂದ್ರ ಕಛೇರಿಯಿಂದ ಜಿಲ್ಲೆಯ ಎರಡು ಸಹಕಾರ ಸಂಘಗಳಲ್ಲಿ ಹಿಂದುಳಿದ ಮತ್ತು ಅಲ್ಪಸಂಖ್ಯಾತರನ್ನು ಸದಸ್ಯರಾಗಿ ನೋಂದಾಯಿಸಲು ಒಟ್ಟು ರೂ. ೬೮,೦೦೦ ಮಂಜೂರಾಗಿ ಸದಸ್ಯರನ್ನು ನೋಂದಾಯಿಸಲಾಗುತ್ತಿದೆ. ಅಲ್ಪಸಂಖ್ಯಾತರ, ಹಿಂದುಳಿದ ವರ್ಗದ, ಪರಿಶಿಷ್ಟಜಾತಿ/ಪಂಗಡದ ಸಹಕಾರ ಸಂಘಗಳಿಗೆ ಆಸ್ತಿ ರೂಪಿಸಿಕೊಳ್ಳಲು ಸಹಾಯಧನ ಮಂಜೂರು ಯೋಜನೆಯಡಿ ಕೇಂದ್ರ ಕಛೇರಿಯಿಂದ ಜಿಲ್ಲೆಯ ಒಂದು ಸಹಕಾರ ಸಂಘಕ್ಕೆ ರೂ. ೧.೦೦ ಲಕ್ಷ ಸಹಾಯಧನ ಮಂಜೂರಾಗಿದೆ.

ತುಮಕೂರು, ತಿಪಟೂರು ಹಾಗೂ ಮಧುಗಿರಿ ತಾಲೂಕುಗಳಲ್ಲಿ ಉಪವಿಭಾಗದ ಕಛೇರಿಗಳಿದ್ದು, ಸಹಕಾರ ಸಂಘಗಳ ಸಹಾಯಕ ನಿಬಂಧಕರು ಆಯಾ ಕಚೇರಿಗಳ ಮುಖ್ಯಸ್ಥರಾಗಿರುತ್ತಾರೆ. ಆಯಾ ಉಪವಿಭಾಗ ಮಟ್ಟದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತಾರೆ. ಉಳಿದ ಚಿಕ್ಕನಾಯಕನಹಳ್ಳಿ, ಗುಬ್ಬಿ, ಕೊರಟಗೆರೆ, ಕುಣಿಗಲ್, ಪಾವಗಡ, ಶಿರಾ ಹಾಗೂ ತುರುವೇಕೆರೆ ತಾಲೂಕುಗಳಲ್ಲಿ ಸಹಕಾರ ಅಭಿವೃದ್ಧಿ ಅಧಿಕಾರಿಗಳ ಕಛೇರಿಗಳಿದ್ದು, ಇವರು ಆಯಾ ತಾಲೂಕು ಮಟ್ಟದ ಆಡಳಿತಾತ್ಮಕ ಕಾರ್ಯವ್ಯಾಪ್ತಿ ಹೊಂದಿರುತ್ತಾರೆ. ಕರ್ನಾಟಕ ರಾಜ್ಯ ಮಹಾಮಂಡಳವು ಸಹಕಾರ ಪತ್ರಿಕೆಯನ್ನು ಹೊರತರುತ್ತಿದ್ದು, ಸಹಕಾರ ಚಳುವಳಿ ಹಾಗೂ ಗ್ರಾಮೀಣಾಭಿವೃದ್ಧಿಗೆ ಮೀಸಲಾದ ಏಕೈಕ ಕನ್ನಡ ಪತ್ರಿಕೆಯಾಗಿರುತ್ತದೆ.

## ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ (ಲಿ) (ಕೆ.ಆರ್.ಐ.ಡಿ.ಎಲ್)

ಈ ನಿಗಮವು ೨೦೦೯ನೇ ಇಸವಿಯವರೆಗೆ ಕರ್ನಾಟಕ ಭೂಸೇನಾ ನಿಗಮ ನಿಯಮಿತವಾಗಿ ಗ್ರಾಮೀಣ ನಿರುದ್ಯೋಗಿ ಮತ್ತು ಅರೆ–ಉದ್ಯೋಗಿ ಯುವಕ, ಯುವತಿಯರಿಗೆ ಉದ್ಯೋಗ ಒದಗಿಸಿ ಅವರ ಜೀವನ ಮಟ್ಟವನ್ನು ಸುಧಾರಿಸುವುದು ಮೊದಲಾದ ಧ್ಯೇಯೋದ್ದೇಶಗಳೊಂದಿಗೆ ೧೯೮೩ರಲ್ಲಿ ತುಮಕೂರಿನಲ್ಲಿ ಅಸ್ತಿತ್ವಕ್ಕೆ ಬಂದಿತು. ಇದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಸ್ವಾಯತ್ತ ಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತಿದೆ. ಕಾರ್ಯಪಾಲಕ ಅಭಿಯಂತರರು, ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ಕಛೇರಿ ಕೆಲಸದಲ್ಲಿ ನೆರವಾಗಲು ಇಬ್ಬರು ಸಹಾಯಕ ಕಾರ್ಯಪಾಲಕ ಅಭಿಯಂತರರು, ಎಂಟು ಎಂಜಿನಿಯರ್‌ಗಳು, ಆರು ಕಾರ್ಯ ನಿರೀಕ್ಷಕರು ಹಾಗೂ ಇತರೆ ಸಿಬ್ಬಂದಿ ವರ್ಗವಿದ್ದು, ಈ ನಿಗಮವು ಕರ್ನಾಟಕ ನಾಗರಿಕ ಸೇವಾ ನಿಯಮಗಳನ್ನು ತನ್ನ ದೈನಂದಿನ ಕೆಲಸ ಕಾರ್ಯಗಳಲ್ಲಿ ಅನುಸರಿಸುತ್ತಿದೆ.

ಸರ್ಕಾರಿ ಇಲಾಖೆಯ ವಿವಿಧ ಕಾಮಗಾರಿಗಳನ್ನು ನಿಗದಿತ ಅವಧಿಯಲ್ಲಿ ಆಯಾ ವರ್ಷದ ದರಪಟ್ಟಿಯಂತೆ ಕಾಮಗಾರಿ ನಿರ್ವಹಣೆ, ಗ್ರಾಮೀಣ ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯೋಗ ನೀಡಲು ಆದ್ಯತೆ, ಗುತ್ತಿಗೆದಾರ ಏಕಸ್ವಾಮ್ಯ ತಪ್ಪಿಸುವುದು. ಸುವರ್ಣ ಗ್ರಾಮೋದಯ ಯೋಜನೆ ಕಾಮಗಾರಿ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಸತಿ ನಿಲಯ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವಹಿಸುವ ಕಾಮಗಾರಿಗಳು ಮತ್ತು ಇತರೆ ಸರ್ಕಾರಿ ಸಂಸ್ಥೆ ಮತ್ತು ಇಲಾಖೆಗಳ ಕಾಮಗಾರಿಗಳ ನಿರ್ವಹಣೆ ಮಾಡುತ್ತಿದೆ. ಜಿಲ್ಲೆಯಲ್ಲಿ ಎರಡು ಉಪವಿಭಾಗದ ಕಚೇರಿಗಳಿದ್ದು, ತುಮಕೂರು ಉಪವಿಭಾಗದಲ್ಲಿ ತುಮಕೂರು, ತಿಪಟೂರು, ಕೊರಟಗೆರೆ, ಕುಣಿಗಲ್, ತುರುವೇಕೆರೆ ಹಾಗೂ ಗುಬ್ಬಿ ತಾಲೂಕು ಸೇರಿದ್ದರೆ, ಶಿರಾ ಉಪವಿಭಾಗದಲ್ಲಿ ಶಿರಾ, ಮಧುಗಿರಿ, ಪಾವಗಡ ಹಾಗೂ ಚಿಕ್ಕನಾಯಕನಹಳ್ಳಿ ತಾಲೂಕುಗಳು ಸೇರಿವೆ. ಆಯಾ ಉಪವಿಭಾಗದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಮುಖ್ಯಸ್ಥರಾಗಿರುತ್ತಾರೆ. ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ವನ ವಿಕಾಸ ಭವನ, ಬೆಂಗಳೂರು ರವರು ಈ ಕಚೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಜಿಲ್ಲಾ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ

ಹಿಂದುಳಿದ ಜನಾಂಗದ ಸರ್ವಾಂಗೀಣ ಅಭಿವೃದ್ಧಿ ಉದ್ದೇಶದಿಂದ ತುಮಕೂರಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯ ಜಿಲ್ಲಾ ಕಚೇರಿಯು ೧೯೭೭ರಲ್ಲಿ ಪ್ರಾರಂಭಗೊಂಡಿತು. ಜಿಲ್ಲಾ ಅಧಿಕಾರಿ ಈ ಕಚೇರಿಯ ಮುಖ್ಯಸ್ಥರಾಗಿದ್ದು ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಅವರ ನೆರವಿಗೆ ಒಂಬತ್ತು ಸಿಬ್ಬಂದಿ ವರ್ಗವಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕೆ.ಎಫ್.ಸಿ, ಕರ್ನಾಟಕ ಟ್ರಜರಿ ಕೋಡ್ ಮೊದಲಾದ ನಿಯಮಗಳನ್ನು ತನ್ನ ದೈನಂದಿನ ಆಡಳಿತದಲ್ಲಿ ಅನ್ವಯಗೊಳಿಸಿಕೊಳ್ಳುತ್ತದೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮತ್ತು ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ಈ ಮುಂದಿನ ಕಾರ್ಯಕ್ರಮಗಳನ್ನು ಕಛೇರಿಯು ಕೈಗೊಳ್ಳುತ್ತಿದೆ.

ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಮೆಟ್ರಿಕ್ ಪೂರ್ವ ಮತ್ತು ನಂತರದ ವಿದ್ಯಾರ್ಥಿ ವೇತನ ನೀಡಿಕೆ, ಶಿಕ್ಷಣ ಶುಲ್ಕಗಳ ರಿಯಾಯಿತಿ, ಕಾನೂನು ಪದವೀಧರರಿಗೆ ತರಬೇತಿ, ಬೆರಳಚ್ಚು ಹಾಗೂ ಶೀಘ್ರಲಿಪಿಗಾರರಿಗೆ ಶಿಷ್ಯವೇತನ, ಆಶ್ರಮ ಶಾಲೆಗಳ ನಿರ್ವಹಣೆ, ನವೋದಯ ಮಾದರಿಯ ವಸತಿ ಶಾಲೆಗಳ ನಿರ್ವಹಣೆ, ಐಟಿಐ, ಡಿಪ್ಲೋಮ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ಹೆಚ್ಚುವರಿ ಭೋಜನಾವೆಚ್ಚ ನೀಡಿಕೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಖಾಸಗಿ ಅನುದಾನಿತ ವಿದ್ಯಾರ್ಥಿನಿಲಯ ಮತ್ತು ಅನಾಥಾಲಯಗಳಿಗೆ ಅನುದಾನ ನೀಡಿಕೆ, ಪ್ರೋತ್ಸಾಹ ಧನ ಮಂಜೂರಾತಿ, ಮಾಂಗಲ್ಯಭಾಗ್ಯ ಯೋಜನೆ ಹಾಗೂ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ ಜಿಲ್ಲೆಯ ವಿವಿಧ ಶಾಲಾ, ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ಒಟ್ಟು ೫೮ ಮೆಟ್ರಿಕ್ ಪೂರ್ವ ಹಾಗೂ ೨೧ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ. ಇದಲ್ಲದೆ ೧೧ ಖಾಸಗಿ ವಿದ್ಯಾರ್ಥಿ ನಿಲಯಗಳು ಹಾಗೂ ೧೦ ಖಾಸಗಿ ಅನಾಥಾಲಯಗಳಿಗೆ ಅನುದಾನ ನೀಡಲಾಗುತ್ತಿದೆ. ಸದರಿ ಸೌಲಭ್ಯಗಳ ನೀಡಿಕೆಯಿಂದ ಒಟ್ಟು

೧೦,೯೫ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕಾಗಿ ಅನುಕೂಲ ಮಾಡಿಕೊಟ್ಟಿದೆ. ಈ ಕಛೇರಿಯ ಅಧೀನದಲ್ಲಿ ಜಿಲ್ಲೆಯ ೧೦ ತಾಲೂಕುಗಳಲ್ಲಿ ಹಿಂದುಳಿದ ವರ್ಗಗಳ ತಾಲೂಕು ವಿಸ್ತರಣಾಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದು, ಆಯಾ ತಾಲೂಕು ಕಾರ್ಯವ್ಯಾಪ್ತಿ ಹೊಂದಿರುತ್ತಾರೆ. ವಿದ್ಯಾರ್ಥಿ ನಿಲಯಗಳ ಉಸ್ತುವಾರಿ, ವಿದ್ಯಾರ್ಥಿವೇತನ ಮೊದಲಾದ ಮಂಜೂರಾತಿ ಕಾರ್ಯಗಳಲ್ಲಿ ನಿರತರಾಗಿರುತ್ತಾರೆ. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ದೇವರಾಜ ಅರಸು ಭವನ, ವಸಂತನಗರ, ಬೆಂಗಳೂರು ಅವರು ಈ ಕಚೇರಿಯ ಮೇಲಧಿಕಾರಿಗಳಾಗಿದ್ದಾರೆ.

### ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

ರಾಜ್ಯ ಹಣಕಾಸು ಸಂಸ್ಥೆಗಳ ೧೯೫೧ರ ಕಾಯ್ದೆಯನ್ವಯ ಕರ್ನಾಟಕದಲ್ಲಿ ಕೈಗಾರಿಕೆಗಳ ಕ್ರಮಬದ್ಧ ಹಾಗೂ ಸಮತೋಲನದ ಬೆಳವಣಿಗೆಗಾಗಿ ೧೯೫೯ರಲ್ಲಿ ಸ್ಥಾಪನೆಗೊಂಡ ಈ ಸಂಸ್ಥೆ ತನ್ನ ಶಾಖಾ ಕಛೇರಿಯನ್ನು ೧೯೮೧ರಲ್ಲಿ ತುಮಕೂರಿನಲ್ಲಿ ಪ್ರಾರಂಭಿಸಿತು. ಸಹಾಯಕ ಪ್ರಧಾನ ವ್ಯವಸ್ಥಾಪಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಅವರ ನೆರವಿಗೆ ಹಿರಿಯ ವ್ಯವಸ್ಥಾಪಕರು (ಕಾನೂನು), ಹಿರಿಯ ವ್ಯವಸ್ಥಾಪಕರು (ತಾಂತ್ರಿಕ), ವ್ಯವಸ್ಥಾಪಕರು (ತಾಂತ್ರಿಕ), ವ್ಯವಸ್ಥಾಪಕರು (ಅ ಮತ್ತು ಯೋ), ವ್ಯವಸ್ಥಾಪಕರು (ಹ ಮತ್ತು ಲೆ), ಉಪ ವ್ಯವಸ್ಥಾಪಕರು (ಹ ಮತ್ತು ಲೆ), ಸಹಾಯಕ ವ್ಯವಸ್ಥಾಪಕರು ಮೊದಲಾದ ಒಟ್ಟು ೩೧ ಸಿಬ್ಬಂದಿ ವರ್ಗವಿತ್ತು. ಈ ಕಛೇರಿ ಜಿಲ್ಲಾ ವ್ಯಾಪ್ತಿ ಅಧಿಕಾರವನ್ನು ಹೊಂದಿದ್ದು, ಉದ್ಯಮಿಗಳಿಗೆ ಹೊಸದಾಗಿ ಕೈಗಾರಿಕೆಗಳನ್ನು ಸ್ಥಾಪಿಸಲು ಅಥವಾ ಈಗಾಗಲೇ ಸ್ಥಾಪನೆಗೊಂಡಿರುವ ಕೈಗಾರಿಕೆಗಳ ವಿಸ್ತರಣೆ ಮತ್ತು ನವೀಕರಣ, ಪ್ರವಾಸೋದ್ಯಮ ಮುಂತಾದ ಚಟುವಟಿಕೆಗಳಿಗೆ ದೀರ್ಘಾವಧಿ ಸಾಲ ಸೌಲಭ್ಯ ನೀಡುತ್ತದೆ. ಈ ಕಛೇರಿಯು ರಾಜ್ಯ ಹಣಕಾಸು ನಿಗಮಗಳ ೧೯೫೧ರ ಕಾಯಿದೆಯ ನಿಯಮಗಳನ್ನು ತನ್ನ ಕೆಲಸ ಕಾರ್ಯಗಳಲ್ಲಿ ಅನ್ವಯಿಸಿಕೊಳ್ಳುತ್ತಿದೆ.

ತಂತ್ರಜ್ಞಾನ ಯೋಜನೆ, ಹೋಟೆಲ್ ಉದ್ದಿಮೆ, ಕೈಗಾರಿಕಾ ವಸಾಹತುಗಳು, ಸಾರಿಗೆ ಉದ್ದಿಮೆ, ಆಧುನೀಕರಣ ಯೋಜನೆ, ಗುಣಮಟ್ಟ ನಿಯಂತ್ರಣ, ಎಲೆಕ್ಟ್ರೋಮೆಡಿಕಲ್ ಉಪಕರಣ, ವಿದ್ಯುತ್ ಜನಕಯಂತ್ರ, ನರ್ಸಿಂಗ್ ಹೋಂ, ಗಣಕಯಂತ್ರ, ಪ್ರವಾಸೋದ್ಯಮ ಚಟುವಟಿಕೆ, ರಸ್ತೆ ನಿರ್ವಹಣೆ, ಅಭಿವೃದ್ಧಿ ಮತ್ತು ನಿರ್ಮಾಣ, ರೋಗಗ್ರಸ್ತ ಘಟಕಗಳ ಪುನರ್‌ವಸತಿ, ವಾಣಿಜ್ಯ ಸಂಕೀರ್ಣ ಮತ್ತು ಗೋದಾಮು ಮೊದಲಾದವುಗಳಿಗೆ ಆರ್ಥಿಕ ನೆರವು ಯೋಜನೆ, ವಿದ್ಯಾವಂತ ನಿರುದ್ಯೋಗಿಗಳು, ಅಂಗವಿಕಲರು, ನಿವೃತ್ತ ಸೈನಿಕರು, ವೃತ್ತಿ ಪರಿಣಿತರಿಗೆ ಸಾಲ ಸೌಲಭ್ಯ ಮುಂತಾದ ಕಾರ್ಯಗಳನ್ನು ಈ ಕಛೇರಿಯು ಅನುಷ್ಠಾನಗೊಳಿಸುತ್ತಿದೆ. ಈ ಕಛೇರಿಯಲ್ಲಿ ಸರಳ ಸಾಲ ಮತ್ತು ಕಡಿಮೆ ಬಡ್ಡಿಯ ಆಧುನೀಕರಣ ಸಾಲವೂ ದೊರೆಯುತ್ತದೆ. ಪ್ರಧಾನ ವ್ಯವಸ್ಥಾಪಕರು (ವೃತ್ತ–೧) ಕೇಂದ್ರ ಕಛೇರಿ, ಬೆಂಗಳೂರು, ಅವರು ಈ ಕಛೇರಿಯ **ಮೇಲಧಿಕಾರಿಗಳಾಗಿರುತ್ತಾರೆ.**

### ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಅಧೀನದಲ್ಲಿ ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ತುಮಕೂರು ಜಿಲ್ಲಾ ಕಛೇರಿಯು ೧೯೬೦ರಲ್ಲಿ ಆರಂಭಗೊಂಡಿತು. ಜಿಲ್ಲಾ ಖಾದಿ ಗ್ರಾಮೋದ್ಯೋಗ ಅಧಿಕಾರಿ ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಅಧೀಕ್ಷಕರು ಮತ್ತು ವಸೂಲಾತಿ ಅಧಿಕಾರಿ, ಪ್ರಥಮ ದರ್ಜೆ ಸಹಾಯಕರು, ತಾಂತ್ರಿಕ ಮೇಲ್ವಿಚಾರಕರು ಮೊದಲಾದ ಸಿಬ್ಬಂದಿ ವರ್ಗವಿದೆ. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ, ಮೊದಲಾದ ನಿಯಮ, ಅಧಿನಿಯಮಗಳನ್ನು ಕಛೇರಿ ತನ್ನ ಕಾರ್ಯನಿರ್ವಹಣೆಯಲ್ಲಿ ಅನ್ವಯಗೊಳಿಸುತ್ತಿದೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಮತ್ತು ಗ್ರಾಮ ಸ್ವಾವಲಂಬನೆ ಪರಿಕಲ್ಪನೆಯನ್ನು ಸಾಕಾರಗೊಳಿಸಲು ಗ್ರಾಮೀಣ ಅನುವಂಶಿಕ ಕಸುಬುದಾರರು ಮತ್ತು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಕಡುಬಡವರ್ಗದ ಜನರಿಗೆ ಜೀವನಾಧಾರ ಕಲ್ಪಿಸಿ, ಅವರ ಜೀವನಮಟ್ಟ ಸುಧಾರಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಘಟಕಗಳ ಸ್ಥಾಪನೆಗೆ ಧನಸಹಾಯ/ತಾಂತ್ರಿಕ ಕೌಶಲ್ಯತೆ ಮತ್ತು ಕಸುಬುದಾರರು ಉತ್ಪಾದಿಸುವ ವಸ್ತುಗಳಿಗೆ ಪ್ರಚಾರ ಹಾಗೂ ಮಾರುಕಟ್ಟೆ ಸೌಲಭ್ಯಗಳ ಉತ್ತೇಜನ ನೀಡುವ ಧ್ಯೇಯೋದ್ದೇಶಗಳೊಂದಿಗೆ ಈ ಮಂಡಳಿಯನ್ನು ರಾಜ್ಯಮಟ್ಟದಲ್ಲಿ ೧೯೫೭ರಲ್ಲಿ ಪ್ರಾರಂಭಿಸಲಾಯಿತು.

ಈ ದೃಷ್ಟಿಯಿಂದ ಗ್ರಾಮೀಣ ಪ್ರದೇಶಗಳಲ್ಲಿ ನಿರುದ್ಯೋಗಿಗಳಿಗೆ ಹಾಗೂ ಅರೆನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಕಡಿಮೆ ಬಂಡವಾಳ ಹೂಡಿ ಗ್ರಾಮೀಣ ಪ್ರದೇಶದಲ್ಲಿ ದೊರೆಯುವ ಕಚ್ಚಾವಸ್ತುಗಳನ್ನು ಉಪಯೋಗಿಸಿ, ವಸ್ತುಗಳನ್ನು ಉತ್ಪಾದಿಸುವ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಸ್ಥಾಪಿಸುವ ಯೋಜನೆಗಳನ್ನು ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯು ಜಾರಿಗೆ ತರುತ್ತಿದೆ. ಧನಸಹಾಯ ಸ್ವರೂಪ ಯೋಜನೆ, ಸಮೂಹ ಬ್ಯಾಂಕ್ ನಿಧಿಯೋಜನೆ, ಗ್ರಾಮೀಣ ಉದ್ಯೋಗ ಸೃಷ್ಟಿ ಯೋಜನೆ, ಪ್ರಧಾನಮಂತ್ರಿಗಳ ಉದ್ಯೋಗ ಸೃಜನ ಕಾರ್ಯಕ್ರಮ ಮೊದಲಾದ ವಿವಿಧ ಯೋಜನೆಗಳು ಹಾಗೂ ಅಭಿವೃದ್ಧಿ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುತ್ತಿದೆ. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ, ಖಾದಿ ಭವನ, ಬೆಂಗಳೂರು ರವರು ಈ ಕಛೇರಿಯ ಮೇಲಧಿಕಾರಿಗಳಾಗಿರುತ್ತಾರೆ.

## ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆ

ಜಿಲ್ಲೆಯಲ್ಲಿ ಈ ಕಛೇರಿಯು ೧೯೮೮ರಲ್ಲಿ ಪ್ರಾರಂಭಗೊಂಡಿತು. ಇದು ೧೯೮೮ ರಿಂದ ೨೦೦೬ರ ವರೆಗೆ ಸಹಾಯಕ ನಿರ್ದೇಶಕರ ಕಛೇರಿ, ಸಣ್ಣ ಉಳಿತಾಯ ಇಲಾಖೆ ಎಂದೂ, ಮೇ ೨೦೦೬ರಿಂದ ಮಾರ್ಚ್ ೨೦೧೦ರ ವರೆಗೆ ಸಹಾಯಕ ನಿರ್ದೇಶಕರು, ಬಂಡವಾಳ ಹೂಡಿಕೆ, ಮಾಹಿತಿ ನಿರ್ವಹಣೆ, ವಸೂಲಾತಿ, ಸಣ್ಣ ಉಳಿತಾಯ ಹಾಗೂ ರಾಜ್ಯ ಲಾಟರಿ ಇಲಾಖೆ ಎಂದು ಏಪ್ರಿಲ್ ೨೦೧೦ರಿಂದ ಸಹಾಯಕ ನಿರ್ದೇಶಕರು ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆ ಎಂದು ಬದಲಾಗಿರುತ್ತದೆ. ಸಹಾಯಕ ನಿರ್ದೇಶಕರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಅಧಿಕಾರ ಹೊಂದಿರುತ್ತಾರೆ. ಇವರಿಗೆ ಆಡಳಿತದಲ್ಲಿ ನೆರವಾಗಲು ಓರ್ವ ಅಭಿವೃದ್ಧಿ ಅಧಿಕಾರಿ, ಏಳು ಮಂದಿ ಸಹಾಯಕ ಅಭಿವೃದ್ಧಿ ಅಧಿಕಾರಿಗಳು, ಓರ್ವ ದ್ವಿತೀಯ ದರ್ಜೆ ಸಹಾಯಕ, ಮೊದಲಾದ ಸಿಬ್ಬಂದಿ ವರ್ಗವಿತ್ತು. ಕರ್ನಾಟಕ ನಾಗರಿಕ ಸೇವಾ ನಿಯಮಗಳು, ಕರ್ನಾಟಕ ಆರ್ಥಿಕ ಸಂಹಿತೆ, ಕರ್ನಾಟಕ ಖಜಾನೆ ಸಂಹಿತೆ, ಕರ್ನಾಟಕ ಸಾದಿಲ್ವಾರು ವೆಚ್ಚ ಕೈಪಿಡಿ ಮೊದಲಾದ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಆಡಳಿತದಲ್ಲಿ ಅನುಸರಿಸುತ್ತಿದೆ.

ರಾಜ್ಯ ಸರ್ಕಾರಿ ನೌಕರರ ಅಂದರೆ ಹಾಲಿ ಕಾರ್ಯ ನಿರ್ವಹಿಸುತ್ತಿರುವ ಹಾಗೂ ನಿವೃತ್ತಿಯಾಗಿರುವ ನೌಕರರ ಪಿಂಚಣಿ ಕುಂದುಕೊರತೆಗೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸುವುದು, ಒಂದನೇ ಜನವರಿ ೨೦೧೫ ರಿಂದ ಅನ್ವಯವಾಗುವಂತೆ ಮುನ್ಸಿಪಲ್ ನೌಕರರ ಪಿಂಚಣಿ ಪ್ರಾಧೀಕರಣದ ಕೆಲಸವನ್ನು ನಿರ್ವಹಿಸಲಾಗುತ್ತಿದೆ. ಹಾಲಿ ಸಣ್ಣ ಉಳಿತಾಯ ಸಂಗ್ರಹಣೆಯ ಕೆಲಸ ನಿರ್ವಹಿಸುತ್ತಿರುವ ಅಧಿಕೃತ ಏಜೆಂಟರುಗಳ ನವೀಕರಣ ಹಾಗೂ ರದ್ಧತಿ ಕೆಲಸ ನಿರ್ವಹಿಸುವುದು, ಸಣ್ಣ ಉಳಿತಾಯದ ಅಂಕಿ ಅಂಶಗಳನ್ನು ಕ್ರೋಢೀಕರಿಸಿ ಮೇಲಧಿಕಾರಿಗಳಿಗೆ ಕಳುಹಿಸುವುದು, ಸರ್ಕಾರವು ನೀಡಿರುವ ಸಾಲಗಳ ಮರುಪಾವತಿ ಮಾಹಿತಿ ಹಾಗೂ ಬಾಕಿ ಉಳಿದಿರುವ ಸಾಲಗಳ ಮಾಹಿತಿ ಸಂಗ್ರಹಿಸಿ ಕಾಲಕಾಲಕ್ಕೆ ಮೇಲಧಿಕಾರಿಗಳಿಗೆ ಕಳುಹಿಸುವುದು ಮೊದಲಾದ ಧ್ಯೇಯೋದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಈ ಕಛೇರಿಯ ಅಧೀನದಲ್ಲಿ ಪ್ರತೀ ತಾಲೂಕಿನ ತಾಲೂಕು ಕಛೇರಿಗಳಲ್ಲಿ ಸಹಾಯಕ ಅಭಿವೃದ್ಧಿ ಅಧಿಕಾರಿಗಳು (ಪಾವಗಡ ಹಾಗೂ ಕುಣಿಗಲ್ ತಾಲೂಕುಗಳನ್ನು ಹೊರತುಪಡಿಸಿ) ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ಸಹಾಯಕ ಅಭಿವೃದ್ಧಿ ಅಧಿಕಾರಿ ಹುದ್ದೆಗಳನ್ನು ಹತ್ತನೇ ಜೂನ್ ೨೦೧೫ ರಿಂದ ಅನ್ವಯವಾಗುವಂತೆ ಜಿಲ್ಲಾ ಕಛೇರಿಗೆ ಸ್ಥಳಾಂತರಿಸಲಾಗಿದೆ. ಇವರು ಪಿಂಚಣಿ ಪ್ರಾಧೀಕರಣ ಸಂಬಂಧದ ಕೆಲಸಗಳನ್ನು ನಿರ್ವಹಿಸಲಿದ್ದಾರೆ, ನಿರ್ದೇಶಕರು, ಪಿಂಚಣಿ, ಸಣ್ಣ ಉಳಿತಾಯ ಮತ್ತು ಆಸ್ತಿ–ಋಣ ನಿರ್ವಹಣೆ ಇಲಾಖೆ, ಬೆಂಗಳೂರು ರವರು ಈ ಕಛೇರಿಯ ತತ್‌ಕ್ಷಣದ ಮೇಲಧಿಕಾರಿಗಳಾಗಿರುತ್ತಾರೆ.

## ಕೇಂದ್ರ ಸರ್ಕಾರಿ ಕಛೇರಿಗಳು

ತುಮಕೂರು ಜಿಲ್ಲೆಯಲ್ಲಿ ಆದಾಯ ತೆರಿಗೆ ಇಲಾಖೆ, ಭಾರತೀಯ ಸಂಚಾರ ನಿಗಮ(ನಿ) ಹಾಗೂ ಅಂಚೆ ಇಲಾಖೆಗಳು ಪ್ರಮುಖವಾಗಿ ಕೇಂದ್ರ ಸರ್ಕಾರದ ಕಛೇರಿಗಳಾಗಿ ಕಾರ್ಯನಿರತವಾಗಿದ್ದು, ಅವುಗಳ ಸಂಕ್ಷಿಪ್ತ ಪರಿಚಯ ಇಲ್ಲಿದೆ.

**ಅಂಚೆ ಇಲಾಖೆ.**

ಇದು ಕೇಂದ್ರ ಸರ್ಕಾರದ ಒಂದು ಪ್ರಮುಖ ಇಲಾಖೆಯಾಗಿದ್ದು, ಜಿಲ್ಲೆಯಲ್ಲಿ ಅಂಚೆ ವ್ಯವಹಾರಗಳು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳುವುದು, ಅಂಚೆ ಕಛೇರಿಗಳ ಕಾರ್ಯನಿರ್ವಹಣೆ ಮೇಲೆ ಸೂಕ್ತ ನಿಯಂತ್ರಣ ಇಟ್ಟುಕೊಳ್ಳುವುದು, ತಪ್ಪಿತಸ್ಥ ಅಂಚೆ ನೌಕರರ ಮೇಲೆ ಅಗತ್ಯ ಶಿಸ್ತು ಕ್ರಮ ಜರುಗಿಸುವುದು ಮೊದಲಾದ ಉದ್ದೇಶಗಳಿಂದ ತುಮಕೂರಿನಲ್ಲಿ ಒಂದನೇ ಅಕ್ಟೋಬರ್ ೧೯೬೫ ರಿಂದ ಕಾರ್ಯನಿರ್ವಹಿಸುತ್ತಿದೆ. ಅಂಚೆ ಅಧೀಕ್ಷಕರು ಈ ಕಛೇರಿಯ ಮುಖ್ಯಾಧಿಕಾರಿಯಾಗಿದ್ದು, ಅವರು ಜಿಲ್ಲಾ ವ್ಯಾಪ್ತಿಯ ಅಧಿಕಾರ ಹೊಂದಿರುತ್ತಾರೆ. ಕಛೇರಿಯಲ್ಲಿ ಅವರ ನೆರವಿಗೆ ಸಹಾಯಕ ಅಂಚೆ ಅಧೀಕ್ಷಕರು(ರೆಗ್ಯುಲರ್), ಸಹಾಯಕ ಅಂಚೆ ಅಧೀಕ್ಷಕರು (ಸ್ಥಾನಿಕ), ೧೫ ಕಛೇರಿ ಸಹಾಯಕರು, ಇಬ್ಬರು ಮಲ್ಟಿ ಟಾಸ್ಕ್ ಮೊದಲಾದ ಸಿಬ್ಬಂದಿಗಳಿದ್ದಾರೆ. ತುಮಕೂರು ಜಿಲ್ಲೆಯಲ್ಲಿ ಅಂಚೆ ಅಧೀಕ್ಷಕರ ಆಡಳಿತ ವ್ಯಾಪ್ತಿಯಲ್ಲಿ ಆರು ಉಪವಿಭಾಗಗಳಿದ್ದು, ತುಮಕೂರು ಉಪವಿಭಾಗದಲ್ಲಿ ಸಹಾಯಕ ಅಂಚೆ ಅಧೀಕ್ಷಕರಿದ್ದು, ತುಮಕೂರು ತಾಲೂಕಿನ ವ್ಯಾಪ್ತಿಗೆ ಬರುವ ಅಂಚೆ ಕಛೇರಿಗಳ ಮೇಲ್ವಿಚಾರಣೆ ಅಧಿಕಾರ ಹೊಂದಿರುತ್ತಾರೆ. ಹಾಗೆಯೇ ತಿಪಟೂರು ಉಪವಿಭಾಗದಲ್ಲಿ ಸಹಾಯಕ ಅಂಚೆ ಅಧೀಕ್ಷಕರಿದ್ದು, ಇವರು ತಿಪಟೂರು, ತುರುವೇಕೆರೆ ಹಾಗೂ ಚಿಕ್ಕನಾಯಕನಹಳ್ಳಿ ವ್ಯಾಪ್ತಿಗೆ ಬರುವ ಎಲ್ಲಾ ಅಂಚೆ ಕಛೇರಿಗಳ ಮೇಲ್ವಿಚಾರಣಾಧಿಕಾರ ಹೊಂದಿರುತ್ತಾರೆ. ಅಂಚೆ ನಿರೀಕ್ಷಕರು, ಮಧುಗಿರಿ ರವರು ಮಧುಗಿರಿ ಹಾಗೂ ಪಾವಗಡ ತಾಲೂಕುಗಳಿಗೆ ಸೇರಿದ ಅಂಚೆ ಕಛೇರಿಗಳ ಮೇಲ್ವಿಚಾರಣಾಧಿಕಾರ ಹೊಂದಿರುತ್ತಾರೆ. ಅಂಚೆ ನಿರೀಕ್ಷಕರು, ಶಿರಾ ರವರು ಶಿರಾ ತಾಲೂಕಿಗೆ ಸೇರಿದ ಅಂಚೆ ಕಛೇರಿಗಳು ಅಲ್ಲದೆ ಚೆನ್ನಕೇಶವಪುರ ಅಂಚೆ ಕಛೇರಿ(ಪಾವಗಡ ತಾಲೂಕು) ಹಾಗೂ ಬಡವನಹಳ್ಳಿ ಅಂಚೆ ಕಛೇರಿ(ಮಧುಗಿರಿ ತಾಲೂಕು) ಸಹ ಇವರ ಅಧಿಕಾರ ವ್ಯಾಪ್ತಿಗೆ ಬರುತ್ತವೆ. ಅಂಚೆ ನಿರೀಕ್ಷಕರು, ಗುಬ್ಬಿ ಉಪವಿಭಾಗ, ಗುಬ್ಬಿ ರವರು ಗುಬ್ಬಿ ತಾಲೂಕಿಗೆ ಸೇರಿದ ಅಂಚೆ ಕಛೇರಿಗಳು ಹಾಗೂ ಬಾಣಸಂದ್ರ ಅಂಚೆ ಕಛೇರಿ (ತುರುವೇಕೆರೆ ತಾಲೂಕು) ಇವರ ಅಧಿಕಾರ ವ್ಯಾಪ್ತಿಗೆ ಬರುತ್ತದೆ. ಅಂಚೆ ನಿರೀಕ್ಷಕರು, ಕುಣಿಗಲ್ ಉಪವಿಭಾಗ, ಕುಣಿಗಲ್ ರವರು ಕುಣಿಗಲ್ ತಾಲೂಕಿನ ವ್ಯಾಪ್ತಿಗೆ ಬರುವ ಅಂಚೆ ಕಛೇರಿಗಳ ನಿಯಂತ್ರಣ ಹಾಗೂ ಹೆಬ್ಬೂರು ಅಂಚೆ ಕಛೇರಿ(ಕುಣಿಗಲ್) ಮತ್ತು ಹೊನ್ನುಡಿಕೆ ಅಂಚೆ ಕಛೇರಿ( ತುಮಕೂರು ತಾಲೂಕು) ಇವರ ಆಡಳಿತ ವ್ಯಾಪ್ತಿಗೆ ಬರುತ್ತವೆ.

ವಿವಿಧ ಉಳಿತಾಯ ಬ್ಯಾಂಕ್ ಯೋಜನೆ, ಉಳಿತಾಯ ಪತ್ರ ಯೋಜನೆ, ಕಿಸಾನ್ ವಿಕಾಸ್ ಪತ್ರ, ಸಾರ್ವಜನಿಕ ಭವಿಷ್ಯ ನಿಧಿ, ಎಲ್ಲಾ ಅಂಚೆ ಸೇವೆಗಳ ಗಣಕೀಕರಣ ಮೊದಲಾದ ಯೋಜನೆಗಳನ್ನು ಈ ಕಛೇರಿಯು ಕಾರ್ಯರೂಪಕ್ಕೆ ತರುತ್ತದೆ. ಪೋಸ್ಟಲ್ ಮ್ಯಾನ್ಯುಯಲ್–೧ ರಿಂದ ೪, ಸೇವಿಂಗ್ಸ್ ಬ್ಯಾಂಕ್ ಮ್ಯಾನ್ಯುಯಲ್ಸ್, ಸೆಂಟ್ರಲ್ ಸಿವಿಲ್ ಸರ್ವೀಸಸ್(ಕಾಂಡಕ್ಟ್ ಅಂಡ್ ಎಂಪ್ಲಾಯ್‌ಮೆಂಟ್) ರೂಲ್ಸ್–೨೦೦೧ ಮೊದಲಾದ ನಿಯಮ, ಅಧಿನಿಯಮಗಳನ್ನು ಈ ಕಛೇರಿಯ ಆಡಳಿತ ನಿರ್ವಹಣೆಯಲ್ಲಿ ಪಾಲಿಸಲಾಗುತ್ತದೆ. ನಿರ್ದೇಶಕರು, ಅಂಚೆ ಸೇವೆಗಳು, ದಕ್ಷಿಣ ಕರ್ನಾಟಕ ಕ್ಷೇತ್ರ ಬೆಂಗಳೂರು–೧ ಅವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

**ಭಾರತೀಯ ಸಂಚಾರ ನಿಗಮ ನಿಯಮಿತ (ಬಿ.ಎಸ್.ಎನ್.ಎಲ್).**

ಸಂಪರ್ಕ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಗುಣಮಟ್ಟದ ಸೌಲಭ್ಯ ಕಲ್ಪಿಸುವುದರ ಜೊತೆಗೆ ನ್ಯಾಯಯುತ ಬೆಲೆ ಮತ್ತು ಸಂಪರ್ಕ ಸೌಲಭ್ಯ ಒದಗಿಸುವುದರಲ್ಲಿ ಏಷ್ಯಾದಲ್ಲೇ ಮೊದಲ ಸ್ಥಾನ ಪಡೆಯುವ ಸಾಮರ್ಥ್ಯ ಹೊಂದಿರುವ ಭಾರತೀಯ ಸಂಚಾರ ನಿಗಮ ನಿಯಮಿತವು ತುಮಕೂರಿನಲ್ಲಿ ಒಂದನೇ ಅಕ್ಟೋಬರ್ ೨೦೦೦ ದಲ್ಲಿ ಸಾರ್ವಜನಿಕ ವಲಯದ ಘಟಕವಾಗಿ ಸ್ಥಾಪನೆಗೊಂಡಿತು. ಜನರಲ್ ಮ್ಯಾನೇಜರ್, ಟೆಲಿಕಾಂ ರವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ಜಿಲ್ಲಾ ವ್ಯಾಪ್ತಿ ಆಡಳಿತಾಧಿಕಾರ ಹೊಂದಿರುತ್ತಾರೆ. ಆಡಳಿತದಲ್ಲಿ ಇವರ ನೆರವಿಗೆ ೪೫೦ ಅಧಿಕಾರಿ ಸಿಬ್ಬಂದಿ ವರ್ಗದವರಿದ್ದು, ಕೇಂದ್ರ ಸರ್ಕಾರದ ಹಾಗೂ ಸಾರ್ವಜನಿಕ ವಲಯ ಘಟಕದ ನಿಯಮ ಅಧಿನಿಯಮಗಳನ್ನು ತನ್ನ ದೈನಂದಿನ ಆಡಳಿತದಲ್ಲಿ ಪಾಲಿಸುತ್ತದೆ. ಜಿಲ್ಲೆಯ ಎಲ್ಲಾ ೧೦ ತಾಲೂಕುಗಳಲ್ಲಿರುವ ತಾಲೂಕು ಮಟ್ಟದ ಕಛೇರಿಗಳು ದೂರವಾಣಿ ವಿನಿಮಯ ಕೇಂದ್ರಗಳು ಹಾಗೂ ಟವರ್‌ಗಳು ಈ ಕಛೇರಿಯ ವ್ಯಾಪ್ತಿಗೆ ಒಳಪಡುತ್ತವೆ. ಇಡೀ ತುಮಕೂರು ಜಿಲ್ಲೆಯಲ್ಲಿ ೧೧೨ ದೂರವಾಣಿ ವಿನಿಮಯ ಕೇಂದ್ರಗಳಿದ್ದು, ೨೮,೨೭೧ ದೂರವಾಣಿಗಳು, ೬,೭೨೮ ಬ್ರಾಡ್‌ಬ್ಯಾಂಡ್ ಸಂಪರ್ಕಗಳು, ೨,೭೭,೮೧೬ ಮೊದಲೇ ಪಾವತಿ ಮಾಡಿ ಸಂಪರ್ಕ ಪಡೆದ ಚರವಾಣಿಗಳು(ಮೊಬೈಲ್ಸ್) ಹಾಗೂ ೨,೬೧೫ ಪೋಸ್ಟ್‌ಪೇಯಿಡ್ ಚರವಾಣಿಗಳು ಸಂಪರ್ಕ ಒದಗಿಸಿದ್ದವು. ಚೀಫ್ ಜನರಲ್ ಮ್ಯಾನೆಜರ್, ಟೆಲಿಕಾಂ ರವರು ಈ ಕಛೇರಿಯ ಮೇಲಧಿಕಾರಿಯಾಗಿರುತ್ತಾರೆ.

**ಆದಾಯ ತೆರಿಗೆ ಇಲಾಖೆ.**

ಕೇಂದ್ರ ಸರ್ಕಾರದ ಕಂದಾಯ ಮೂಲಗಳಲ್ಲೊಂದಾದ ಆದಾಯ ತೆರಿಗೆ ಹಾಗೂ ಅದಕ್ಕೆ ಸಂಬಂಧಿಸಿದ ತೆರಿಗೆ ನಿಯಮಗಳನ್ನು ಜಾರಿಗೊಳಿಸುವ ಉದ್ದೇಶದಿಂದ ಆದಾಯ ತೆರಿಗೆ ಕಛೇರಿಯು ತುಮಕೂರಿನಲ್ಲಿ ಪ್ರಾರಂಭಗೊಂಡಿತು. ಆದಾಯ ತೆರಿಗೆ ಹೆಚ್ಚುವರಿ ಜಂಟಿ ಆಯುಕ್ತರು, ತುಮಕೂರು ವಲಯ ಇವರು ಈ ಕಛೇರಿಯ ಮುಖ್ಯಸ್ಥರಾಗಿದ್ದು, ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಆಡಳಿತಾಧಿಕಾರ ಹೊಂದಿರುತ್ತಾರೆ. ಹೆಚ್ಚುವರಿ ಜಂಟಿ ಆಯುಕ್ತರ ಅಧೀನದಲ್ಲಿ ಒಬ್ಬರು ಸಹಾಯಕ ಆಯುಕ್ತರು, ನಾಲ್ವರು ಆದಾಯ ತೆರಿಗೆ ಅಧಿಕಾರಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಅದಲ್ಲದೆ ತಿಪಟೂ-ರಿನಲ್ಲಿ ಒಂದು ಆದಾಯ ತೆರಿಗೆ ಕಛೇರಿಯಿದ್ದು, ಅದರ ವ್ಯಾಪ್ತಿಗೆ ತಿಪಟೂರು, ಚಿಕ್ಕನಾಯಕನಹಳ್ಳಿ ಹಾಗೂ ತುರುವೇಕೆರೆ ತಾಲೂಕುಗಳು ಒಳಪಡುತ್ತವೆ. ಆದಾಯ ತೆರಿಗೆ ಅಧಿಕಾರಿ (ಟಿ.ಡಿ.ಎಸ್) ಇವರೂ ಸಹ ತುಮಕೂರಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ತುಮಕೂರು ಜಿಲ್ಲೆಯ ಎಲ್ಲಾ ಬಟವಾಡೆ ಅಧಿಕಾರಿಗಳು ಇವರ ಅಧಿಕಾರ ವ್ಯಾಪ್ತಿಗೆ ಒಳಪಡುತ್ತಾರೆ.

ಕಾಯ್ದೆ ಹಾಗೂ ನಿಯಮಗಳಿಗನುಸಾರವಾಗಿ ಬೇರೆ ಬೇರೆ ವಿಧಾನಗಳಿಂದ ಆದಾಯ ತೆರಿಗೆಯನ್ನು ಸಂಗ್ರಹಿಸುವುದು ಹಾಗೂ ಜನರಲ್ಲಿ ಸಮಯಕ್ಕನುಗುಣವಾಗಿ ಸರಿಯಾದ ತೆರಿಗೆ ಸಂದಾಯದ ಮನೋಭಾವವನ್ನು ಜಾಗೃತಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಈ ಕಛೇರಿಯ ಚಟುವಟಿಕೆಗಳಾಗಿವೆ. ಆದಾಯ ತೆರಿಗೆ ಕಾಯ್ದೆ ಹಾಗೂ ನಿಯಮ ೧೯೬೧, ಸಂಪತ್ತು ತೆರಿಗೆ ಕಾಯ್ದೆ-೧೯೫೬, ಉಡುಗೊರೆ (ಗಿಫ್ಟ್) ತೆರಿಗೆ ಅಧಿನಿಯಮ ೧೯೫೭ ಹಾಗೂ ಸರ್ಕಾರದ ಇತರೆ ನಿಯಮ ಅಧಿನಿಯಮಗಳನ್ನು ಈ ಕಾರ್ಯಾಲಯವು ತನ್ನ ದೈನಂದಿನ ಆಡಳಿತಾತ್ಮಕ ಕೆಲಸ ಕಾರ್ಯಗಳಲ್ಲಿ ಅನ್ವಯಗೊಳಿಸಿಕೊಳ್ಳುತ್ತಿದೆ.

ಪ್ರಧಾನ ಮುಖ್ಯ ಆಯುಕ್ತರು, ಆದಾಯ ತೆರಿಗೆ ಇಲಾಖೆ, ಕರ್ನಾಟಕ ಮತ್ತು ಗೋವಾ, ಬೆಂಗಳೂರು-೧ ರವರು ಈ ಕಛೇರಿಗೆ ಮೇಲಧಿಕಾರಿಗಳಾಗಿರುತ್ತಾರೆ.

***